


# ಅನಂತಪಥ



**ವಿಶಿಷ್ಟ ಪ್ರೇರಣಾದಾಯಿ ವ್ಯಕ್ತಿತ್ವ**

ನಾನು ಕಂಡ ಅನಂತಕುಮಾರ್ ಮಾಲಿಕೆಯಲ್ಲಿ ಪುಟ-3

**ಶ್ರೀ ಬಸವರಾಜ ಬೊಮ್ಮಾಯಿ**, ಮುಖ್ಯಮಂತ್ರಿಯವರು

ಸಂಪುಟ - 2 ಅಕ್ಟೋಬರ್ - 2021 ಸಂಚಿಕೆ - 4

## ಸಸ್ಯಾಗ್ರಹ: ವಿಶಿಷ್ಟ ಹಸಿರು ಯೋಜನೆ




2014ರ ಅಕ್ಟೋಬರ್ 2. ಮಹಾತ್ಮಾ ಗಾಂಧಿಯವರ ಜನ್ಮದಿನದಂದು ಪ್ರಧಾನಿ ನರೇಂದ್ರ ಮೋದಿಯವರು ಸ್ವಚ್ಛ ಭಾರತ ಅಭಿಯಾನವನ್ನು ಪ್ರಾರಂಭಿಸಿದರು. ಅದನ್ನು ವ್ಯಾಖ್ಯಾನಿಸುತ್ತ ಸ್ವಚ್ಛಾಗ್ರಹವೆಂದರೆ ಕೇವಲ ಕಸ ಗುಡಿಸುವುದಲ್ಲ, ಅದೊಂದು ಜೀವನ ಕ್ರಮ, ಶಿಸ್ತು; ಅದೇ ರೀತಿ ನಮ್ಮ ನಡುವೆ ಈಗೊಂದು “ಸಸ್ಯಾಗ್ರಹ ನಡೆಯಬೇಕಿದೆ, ಕಳೆದ ನೂರು ವರ್ಷಗಳಲ್ಲಿ ನಾವು ಈ ಭೂಮಿಯಲ್ಲಿ ಕಳಕೊಂಡ ಹಸುರಿನ ಆವರಣದ ಪುನರ್ಸ್ಥಾಪನೆಯಾಗಬೇಕು, ಹಾಗಾಗಿ ಆಗ್ರಹ ನಡೆಯಬೇಕು” ಎಂದಿದ್ದರು, ಅನಂತಕುಮಾರರು.

ಅನಂತಕುಮಾರರು ಸುಮ್ಮನೆ ಉಪದೇಶಮಾಡುವ ನಾಯಕರಲ್ಲ, ತಾವು ನಂಬಿದ್ದನ್ನು ಮಾಡಿ ತೋರಿಸುವವರು. 2015, ಡಿಸೆಂಬರ್ ಕೊನೆಯ ವಾರ. ಬಸವನಗುಡಿಯ ನ್ಯಾಷನಲ್ ಹೈಸ್ಕೂಲ್ ಮೈದಾನದಲ್ಲಿ ಅದಮ್ಯ ಚೇತನ ಸೇವಾ ಉತ್ಸವ, ಹೊಸ ವರ್ಷದ ಸ್ವಾಗತದ ಸಂಭ್ರಮ; ಸಾಮೂಹಿಕವಾಗಿ ವಂದೇ ಮಾತರಂ ಗಾಯನದೊಂದಿಗೆ. ಸಸ್ಯಾಗ್ರಹದ ಪ್ರಾರಂಭಕ್ಕೆ ಇದಕ್ಕಿಂತ ಒಳ್ಳೆಯ ಹಿನ್ನೆಲೆ ಬೇಕೆ? ಆಗ ಮೊಳಗಿದ ಸುಜಲಾಂ ಸುಫಲಾಂ ಜೊತೆಗೆ ಸಸ್ಯ ಶ್ಯಾಮಲಾಂ ಕೂಡ ನಮ್ಮ ಜೀವನದ ದರ್ಶನವಾಗಲಿ ಎಂದ ಅವರು 2016 ರ ಮೊದಲನೆಯ

ಪುಟ 2 ರಲ್ಲಿ ಮುಂದುವರೆದಿದೆ

## ಆಧುನಿಕತೆ - ಪರಂಪರೆಗಳ ಆದರ್ಶ ಮಿಶ್ರಣವಾಗಿದ್ದ ಅನಂತಕುಮಾರ್



**ರಾಜನಾಥ ಸಿಂಗ್**
**ಕೇಂದ್ರ ರಕ್ಷಣಾ ಸಚಿವರು**

ಅನಂತಕುಮಾರರು ಬದುಕಿದ್ದಿದ್ದರೆ ಇಂದು ಅವರಿಗೆ 62 ವರ್ಷಗಳಾಗುತ್ತಿತ್ತು. ಅವರ ಅಕಾಲಿಕ ನಿಧನವು ಅವರ ಪರಿವಾರಕ್ಕೆ ಮತ್ತು ಹಿತೈಷಿಗಳಿಗೆ ಆದ ನಷ್ಟ ಮಾತ್ರವಲ್ಲ, ಅದು ದೇಶದಲ್ಲಿ ಪ್ರಗತಿಪರ ರಾಜಕೀಯವನ್ನು ಸಮರ್ಥಿಸುವ ಎಲ್ಲರಿಗೂ ಒಂದು ದೊಡ್ಡ ಆಘಾತವಾಗಿತ್ತು. ಏಕೆಂದರೆ ಅನಂತಕುಮಾರರು ಅಂತಹ ರಾಜನೀತಿಯ ಪ್ರತಿನಿಧಿಯಾಗಿದ್ದರು. ವ್ಯಕ್ತಿತ್ವದಲ್ಲಿ ಸಹಜತೆ, ಪಕ್ಷದ ಕೆಲಸದಲ್ಲಿ ಕರ್ಮಠತೆ, ಸರಕಾರೀ ಜವಾಬ್ದಾರಿಗಳಲ್ಲಿ ಶ್ರದ್ಧೆಯನ್ನು ಹೊಂದಿದ್ದ ಅನಂತಕುಮಾರರು ನಮ್ಮೆಲ್ಲರಿಗೆ ಪ್ರಿಯರಾಗಿದ್ದರು.

ರಾಜಕೀಯ ಜೀವನದಲ್ಲಿ ಜನರ ವಿಶ್ವಾಸವನ್ನು ಗಳಿಸುವುದು ಸುಲಭವಲ್ಲ. ಆದರೆ ಗಳಿಸಿದ ವಿಶ್ವಾಸವನ್ನು ಉಳಿಸಿಕೊಳ್ಳುವುದು ಅದಕ್ಕಿಂತ ಕಠಿಣವಾದ ಸವಾಲು. ಅನಂತಕುಮಾರರು ಇಷ್ಟೊಂದು ದೀರ್ಘಕಾಲ ಸತತವಾಗಿ ಚುನಾವಣೆಯಲ್ಲಿ ಜಯವನ್ನು ಸಾಧಿಸಿರುವುದು, ಅವರು ಜನರ ಆಶೋತ್ತರಗಳ ಪರವಾಗಿ ನಿಂತಿದ್ದರೆಂಬುದನ್ನು ಸೂಚಿಸುತ್ತದೆ. ಅವರು ಜನರಿಗೆ ನಿರಾಶರಾಗುವ ಅವಕಾಶವನ್ನೇ ನೀಡಲಿಲ್ಲ. ರಾಜಕೀಯ ಜೀವನದಲ್ಲಿ ಜನರ ನಡುವೆ ತನ್ನ, ತನ್ನ ವಿಚಾರಧಾರೆಯ ಮತ್ತು ತನ್ನ ಪಕ್ಷದ ವಿಶ್ವಾಸಾರ್ಹತೆಯನ್ನು ಉಳಿಸಿಕೊಳ್ಳುವುದು ಯಾವುದೇ ಜನನಾಯಕನಿಗೆ ಪ್ರಮುಖ ಕರ್ತವ್ಯವಾಗಬೇಕು ಎಂದು ನನ್ನ ಅಭಿಪ್ರಾಯ. ಈ ವಿಷಯದಲ್ಲಿ ಅನಂತಕುಮಾರರ ತಮ್ಮ ಜೀವನದುದ್ದಕ್ಕೂ ಸಫಲರಾಗಿದ್ದರು.

ನಾನು ಭಾರತೀಯ ಜನತಾ ಯುವ ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷನಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಮೊದಲ ಬಾರಿಗೆ ನನ್ನ ಮತ್ತು ಅನಂತಕುಮಾರರ ನಡುವೆ ಸಂಪರ್ಕ ಬೆಳೆಯಿತು. ಆ ಕಾಲದಲ್ಲಿ ನಾನು ಕರ್ನಾಟಕ ರಾಜ್ಯದ ಪ್ರವಾಸ ಕೈಗೊಂಡಾಗ ಒಂದು ಸಭೆಯಲ್ಲಿ ಅವರೊಂದಿಗೆ ನನ್ನ ಭೇಟಿಯಾಯಿತು. ಆ ಸಮಯದಲ್ಲಿ ಪಕ್ಷದ ರಾಜ್ಯಾಧ್ಯಕ್ಷರಾಗಿದ್ದ ಶ್ರೀ ಯಡಿಯೂರಪ್ಪನವರೊಡನೆ ಮಾತನಾಡಿ ಅನಂತಕುಮಾರರನ್ನು ಕರ್ನಾಟಕ ರಾಜ್ಯದ ಭಾರತೀಯ ಯುವ ಮೋರ್ಚಾ ಅಧ್ಯಕ್ಷರನ್ನಾಗಿ ಘೋಷಣೆ ಮಾಡಿದ್ದೆ. ತದನಂತರ ಅವರು ಅಟಲ್ ಜೀಯವರ ಸರಕಾರದಲ್ಲಿ ಮಂತ್ರಿಯಾದರು. ಆಗ ನಾನು ರಸ್ತೆ ಸಾರಿಗೆ, ಹೆದ್ದಾರಿ ಮತ್ತು ಶಿಪ್ಪಿಂಗ್ ವಿಭಾಗದ ಮಂತ್ರಿಯಾಗಿದ್ದೆ. ನಂತರ ನಾನು ಕೃಷಿ ಮಂತ್ರಿಯಾದ ಮೇಲೆ ಅವರ ಮತ್ತು ನನ್ನ ನಡುವಣ ಸಂಬಂಧ ಬಲವಾಯಿತು. ಆದರೆ ನಿಜವಾದ ಅರ್ಥದಲ್ಲಿ ನನ್ನ ಮತ್ತು ಅವರ ನಡುವೆ ನಿಕಟತೆ ಉಂಟಾದದ್ದು ನಾನು ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷನಾಗಿ ಜವಾಬ್ದಾರಿ ವಹಿಸಿಕೊಂಡ ಮೇಲೆ.

ಪುಟ 4 ರಲ್ಲಿ ಮುಂದುವರೆದಿದೆ



ಅನಂತಪಥ ಮಾಸಪತ್ರಿಕೆಯ 15ನೆಯ ಸಂಚಿಕೆಯನ್ನು ಕಳೆದ ಸೆಪ್ಟೆಂಬರ್ 22ರಂದು ಕರ್ನಾಟಕದ ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿಯವರು ಬಿಡುಗಡೆ ಮಾಡಿದರು.

ವಿಧಾನಸೌಧದ ಮುಖ್ಯಮಂತ್ರಿಯವರ ಕಚೇರಿಯಲ್ಲಿ ನಡೆದ ಸರಳ ಸಮಾರಂಭದಲ್ಲಿ ಮುಖ್ಯಮಂತ್ರಿಯವರೊಡನೆ ಸಚಿವರಾದ ಶ್ರೀ ಗೋವಿಂದ ಕಾರಜೋಳ, ಶ್ರೀ ವಿ. ಸೋಮಣ್ಣ, ಶ್ರೀ ಮುರುಗೇಶ ನಿರಾಣಿಯವರೂ ಹಲವರು ಶಾಸಕರೂ ಪಾಲ್ಗೊಂಡಿದ್ದರು. ಶ್ರೀ ಅನಂತಕುಮಾರ್ ಅವರ 62ನೆಯ ಜನ್ಮದಿನದ ಸಂದರ್ಭದಲ್ಲಿ ಮುಖ್ಯಮಂತ್ರಿಯವರೂ ನೆರೆದಿದ್ದ ಗಣ್ಯರೂ ಅನಂತಕುಮಾರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವನಮನ ಸಲ್ಲಿಸಿದರು.



**ವಿಶ್ವಾಸಕ್ಕೆ ಮತ್ತೊಂದು ಹೆಸರು ಅನಂತಕುಮಾರ್**
ಶ್ರೀ ಕೆ ಎಸ್ ಈಶ್ವರಪ್ಪ
ಪುಟ - 4



**ಕಾರ್ಯಕರ್ತರ ಕಣ್ಮಣಿ**
ಶ್ರೀ ಬಿ.ಸಿ.ನಾಗೇಶ್
ಪುಟ - 5



**ಪರರ ಒಳಿತಿಗಾಗಿ ಮೀಸಲಿಟ್ಟ ಬದುಕು**
ಶ್ರೀ ಕೃಷ್ಣ ಸಂಪಗಾಂವಕರ್
ಪುಟ - 5



**ಬಡವರಿಗೆ ತಲೆಯ ಮೇಲೊಂದು ಸೂರು ಕೊಟ್ಟ ಅನಂತಕುಮಾರ್**
ಶ್ರೀ ಗೋವಿಂದ ಕಾರಜೋಳ
ಪುಟ - 7





# ವಿಶಿಷ್ಟ ಹಸಿರು ಯೋಜನೆ

ಪುಟ 1 ರಿಂದ






ಭಾನುವಾರದಂದು ಸಸ್ಯಾಗ್ರಹ ಪ್ರಾರಂಭವಾಗಲಿದೆ ಎಂದು ಘೋಷಣೆ ಮಾಡಿಯೇ ಬಿಟ್ಟರು. ಅಂದು ಪ್ರಾರಂಭವಾದ ಸಸ್ಯಾಗ್ರಹದ ಹಸಿರು ಭಾನುವಾರ ಕಾರ್ಯಕ್ರಮ ಸತತವಾಗಿ ನಡೆದುಕೊಂಡು ಬಂದಿದ್ದು 03/10/2021 ರ ಭಾನುವಾರಕ್ಕೆ 301 ರ ಮೈಲಿಗಲ್ಲನ್ನು ತಲುಪಿತು.

"ನಾವು ಪ್ರಕೃತಿ-ಸಂಸ್ಕೃತಿ ಎಂಬ ಪರಿಕಲ್ಪನೆಯೊಂದಿಗೆ 03/01/2016 ರ ಭಾನುವಾರದಂದು ಗಾಂಧಿಬಜಾರಿನ ಟ್ಯಾಗೋರ್ ವೃತ್ತದ ಬಳಿಯಿರುವ ಸರಕಾರಿ ಶಾಲೆಯ ಆವರಣದ ಅನಂತವನದಲ್ಲಿ ಗಿಡನೆಡುವ ಕಾರ್ಯಕ್ರಮವನ್ನು ಪ್ರಾರಂಭಿಸಿದೆವು. ಸಲಿಕೆ, ಗುದ್ದಲಿ, ಗೊಬ್ಬರ, ಗಿಡಗಳೊಂದಿಗೆ ಸುಮಾರು 15-20 ಜನರು ಗಿಡ ನೆಡುವ ಅದಮ್ಯ ಉತ್ಸಾಹದೊಂದಿಗೆ ಸ್ಥಳವನ್ನು ತಲುಪಿದೆವು. ಉತ್ಸಾಹವೊಂದೇ ನಮ್ಮ ಆಸ್ತಿ. ಗಿಡಗಳನ್ನು ಬೆಳೆಸಿದ ಪ್ಲಾಸ್ಟಿಕ್ ಕವರನ್ನು ತೆಗೆಯಬೇಕೆಂದು ಸಹಾ ನಮಗೆ ತಿಳಿದಿರಲಿಲ್ಲ. ಹತ್ತು ಗುಂಡಿ ತೋಡುವುದರಲ್ಲಿ ನಾವೆಲ್ಲ ಸುಸ್ತೋ ಸುಸ್ತು! ಕೊನೆಗೂ ಹತ್ತು ಗಿಡಗಳನ್ನು ನೆಟ್ಟು ಮೊದಲ ಹಸಿರು ಭಾನುವಾರವನ್ನು ಯಶಸ್ವಿಯಾಗಿ ಆಚರಿಸಿದೆವು" ಹೀಗೆಂದು ನೆನಪಿಸಿಕೊಳ್ಳುತ್ತಾರೆ, ಶ್ರೀಮತಿ ತೇಜಸ್ವಿನಿ ಅನಂತಕುಮಾರ್.

ಅಲ್ಲಿಂದ ಮುಂದೆ ನಿರಂತರವಾಗಿ ನಡೆದುಕೊಂಡು ಬಂದ ಹಸಿರು ಭಾನುವಾರ 2017ರಲ್ಲಿ ನೂರನೆಯ ಮೈಲಿಗಲ್ಲನ್ನು ತಲುಪಿದಾಗ ನಗರದ 100 ಕಡೆ ಏಕಕಾಲದಲ್ಲಿ ಸಸಿಗಳನ್ನು ನೆಡುವ ಮಹತ್ವಾಕಾಂಕ್ಷಿ ಯೋಜನೆ ಸಿದ್ಧವಾಯಿತು. ಅದೊಂದು ಅಪೂರ್ವ ಅನುಭವ. ಅಷ್ಟೊಂದು ಕಡೆ ಗುಂಡಿಗಳನ್ನು ತೋಡಿಸುವುದು, ಸಸಿಗಳನ್ನು, ಟ್ರೀಗಾರ್ಡುಗಳನ್ನು ತಲುಪಿಸುವುದು ಮತ್ತು ಅಷ್ಟೊಂದು ಸ್ವಯಂಸೇವಕರನ್ನು ನಿಭಾಯಿಸುವುದು ಸವಾಲಿನ ಕೆಲಸವಾಗಿತ್ತು. ಆದರೆ ಎಲ್ಲವೂ ಸುಗಮವಾಗಿ ನಡೆದು ದಿನದ ಕೊನೆಗೆ ನಗರದ 143 ಸ್ಥಳಗಳಲ್ಲಿ ಗಿಡ ನೆಡುವ ಕಾರ್ಯಕ್ರಮ ನಡೆಯಿತು. ಇದರ ಜೊತೆಗೆ, ಕಲ್ಕತ್ತ, ಜೋಧಪುರ, ವಾರಣಾಸಿ, ಮತ್ತು ಅಮೆರಿಕದ ನ್ಯೂಜರ್ಸಿಯಲ್ಲಿ ಕೂಡ ಕಾರ್ಯಕ್ರಮ ನಡೆಯಿತು.

1 0 0 ನೆಯ ಹಸಿರು ಭಾನುವಾರದ ಸಂಭ್ರಮದ ಅಂಗವಾಗಿ ವಿವಿದೆಡೆ ಗಿಡ ನೆಡುವ ಕಾರ್ಯಕ್ರಮದಲ್ಲಿ ಹೆಸರಾಂತ ಸಾಹಿತಿ ಡಾ. ದೊಡ್ಡರಂಗೇ ಗೌಡರು, ಚಿತ್ರ ನಟ ಸುದೀಪ್, ಜ್ಞಾನಪೀಠ ಪುರಸ್ಕೃತ ಡಾ. ಚಂದ್ರಶೇಖರ ಕಂಬಾರ ಮುಂತಾದವರು ಭಾಗವಹಿಸಿದ್ದರು. ಶಾಲಿನೀ ಮೈದಾನದ ಸಭೆಯಲ್ಲಿ ಸುಮಾರು 2000 ಜನರು ಸೇರಿದ್ದರು. 201ನೆಯ ಹಸಿರು ಭಾನುವಾರವನ್ನು ವಿಶ್ವವಿದ್ಯಾನಿಲಯದ ಆವರಣದಲ್ಲಿ ನಡೆಸಲಾಗಿತ್ತು. ಈ ರೀತಿಯಾಗಿ ಒಂದೊಂದೇ ಹೆಜ್ಜೆ ಮುಂದೆ ಸಾಗುತ್ತ 250, 300 ಭಾನುವಾರಗಳನ್ನೂ ದಾಟಿ ಇದೀಗ 03/10/2021 ರಂದು 301 ನೆಯ ಹಸಿರು ಭಾನುವಾರವನ್ನು ದೊಡ್ಡ ರೀತಿಯಲ್ಲಿ ಬೆಂಗಳೂರಿನ ಹೊರವಲಯದ ಭವಾನಿ ಮಾನೆ ಸರೋವರದ ಪರಿಸರದಲ್ಲಿ 1300 ಕ್ಕೂ ಹೆಚ್ಚು ಗಿಡಗಳನ್ನು ನೆಡುವ ಮೂಲಕ ಆಚರಿಸಲಾಯಿತು.

ಅನ್ನ, ಅಕ್ಷರ, ಆರೋಗ್ಯ ಎಂಬ ತ್ರಿವಳಿ ಧ್ಯೇಯದೊಂದಿಗೆ ಪ್ರಾರಂಭವಾದ ಅದಮ್ಯ ಚೇತನ ಸಂಸ್ಥೆಯು 2007 ರಿಂದಲೇ ಹಸಿರು ಜೀವನ ಶೈಲಿಯನ್ನು ಪ್ರತಿಪಾದಿಸಲು ಪ್ರಾರಂಭಿಸಿತ್ತು. ಈ ದಿಸೆಯಲ್ಲಿ ಪಳೆಯುಳಿಕೆ ಇಂಧನ ರಹಿತ, ಶೂನ್ಯ ತ್ಯಾಜ್ಯ ಅಡುಗೆ ಮನೆ, ಪ್ಲಾಸ್ಟಿಕ್ ನಿಷೇಧ, ಮರುಬಳಕೆಯ ಪಾತ್ರೆಗಳ ಬಳಕೆ, ಪ್ಲೇಟ್ ಬ್ಯಾಂಕ್, ಸೈಕಲ್ ಸವಾರಿ, ಸಾರ್ವಜನಿಕ ಸಾರಿಗೆಯ ಬಳಕೆ, ತಾರಸಿ ತೋಟಗಳು, ಹೀಗೆ ಹಸಿರು ಜೀವನ ಶೈಲಿಯನ್ನು ಪ್ರಚೋದಿಸುವ ಹತ್ತು ಹಲವು ಅಂಶಗಳ ಪರಿಸರ ವ್ಯವಸ್ಥೆಯನ್ನು ಸಸ್ಯಾಗ್ರಹ ಒಳಗೊಂಡಿರುತ್ತದೆ. ಆದುದರಿಂದಲೇ "ನಮಗೆ ನಾವೇ ಕೊಟ್ಟುಕೊಳ್ಳುವ ಅತಿದೊಡ್ಡ ಉಡುಗೊರೆಯೆಂದರೆ ಸಸ್ಯಾಗ್ರಹ" ಎಂದು ಅನಂತಕುಮಾರ್ ಹೇಳುತ್ತಿದ್ದರು.

ಆರೋಗ್ಯಕ್ಕೆ ಪೂರಕವಾಗಿ ಶುದ್ಧ ಗಾಳಿ ಮತ್ತು ಶುದ್ಧ ನೀರು ಬೇಕು. ಇವೆರಡರ ಕೊರತೆಯಿಂದಾಗಿ ಜಗತ್ತಿನ ಅನೇಕ ನಗರಗಳು ಇಂದು ಅವನತಿಯತ್ತ ಸಾಗುತ್ತಿವೆ. ಮನುಷ್ಯ ತನ್ನ ಆಹಾರವನ್ನು ತಾನೇ ಉತ್ಪಾದಿಸಿಕೊಳ್ಳಬಹುದು, ತನಗೆ ಬೇಕಾದ ಔಷಧಿಗಳನ್ನು ತಾನೇ ತಯಾರಿಸಿಕೊಳ್ಳಬಹುದು, ಆದರೆ ಜೀವನಾವಶ್ಯಕವಾದ ಆಮ್ಲಜನಕವನ್ನು ಸಸ್ಯಗಳು ಮಾತ್ರ ಉತ್ಪಾದಿಸ ಬಲ್ಲವು. ಸಸ್ಯಗಳು ಮಾತ್ರವೇ ಅಂತರ್ಜಲ ಮಟ್ಟವನ್ನು ಏರಿಸಬಲ್ಲವು. ಹೀಗಾಗಿ, ಮನುಷ್ಯನಿಗೆ ಸಸ್ಯಗಳ ಮೇಲಿನ ಅವಲಂಬನೆ ಅನಿವಾರ್ಯ.

ಒಂದು ಗಿಡವು ಸರಾಸರಿ ೧೦೦ ಕೆ.ಜಿ ಆಮ್ಲಜನಕವನ್ನು ಕೊಡುತ್ತದೆ. ಒಬ್ಬ ಸಾಧಾರಣ ವ್ಯಕ್ತಿಯು ವರ್ಷವೊಂದಕ್ಕೆ ಸುಮಾರು 7 0 0 ಕೆ.ಜಿ ಶುದ್ಧ ಆಮ್ಲಜನಕವನ್ನು ಸೇವಿಸುತ್ತಾನೆ ಎಂದು ಸಂಶೋಧನೆಗಳು ತಿಳಿಸಿವೆ. ಇಷ್ಟು ಆಮ್ಲಜನಕವನ್ನು ಉತ್ಪಾದಿಸಲು ಕನಿಷ್ಟ ಏಳು ಮರಗಳು ಬೇಕು. ಬೆಂಗಳೂರಿನಲ್ಲಿ 2014 ರ ಮರಗಣತಿಯಂತೆ ಕೇವಲ

ಪುಟ 7 ರಲ್ಲಿ ಮುಂದುವರೆದಿದೆ












# ಚೈತನ್ಯಶೀಲ, ಪ್ರೇರಣಾದಾಯಿ ವ್ಯಕ್ತಿತ್ವದ ಹೆಜ್ಜೆಗುರುತುಗಳು

ಶ್ರೀ ಬಸವರಾಜ ಬೊಮ್ಮಾಯಿ
ಮುಖ್ಯಮಂತ್ರಿಯವರು, ಕರ್ನಾಟಕ ಸರ್ಕಾರ




ಶ್ರೀ ಅನಂತಕುಮಾರರ ಈ 6 2 ನೆಯ ಜನ್ಮದಿನವು ನಮಗೆಲ್ಲ ಪ್ರೇರಣಾ ದಿನವಾಗಿದೆ.

ಈ ದಿನದಂದು ಹಿಂದಿರುಗಿ ನೋಡಿದಾಗ ಅನಂತಕುಮಾರ್ ಅವರು ನಮಗೆ ಎಷ್ಟೊಂದು ನೆನಪುಗಳನ್ನು ಬಿಟ್ಟು ಹೋಗಿದ್ದಾರೆ, ಎಷ್ಟೊಂದು ಕಾರ್ಯವನ್ನು ಮಾಡಿ ಹೋಗಿದ್ದಾರೆ ಎಂದು ಅಚ್ಚರಿಯಾಗುತ್ತದೆ. ಅವರು ತಮ್ಮ ಹೆಜ್ಜೆ ಗುರುತುಗಳನ್ನು ಶಾಶ್ವತವಾಗಿ ಈ ನೆಲದ ಮೇಲೆ ಬಿಟ್ಟು ಹೋಗಿದ್ದಾರೆ. ಹೀಗಾಗಿ, ಪ್ರತಿದಿನ ಒಂದಲ್ಲ ಒಂದು ಕಾರಣಕ್ಕಾಗಿ ಈ ಭಾರತ ದೇಶದಲ್ಲಿ ಬಹುಸಂಖ್ಯಾತ ಜನರು ಅವರನ್ನು ನೆನಪು ಮಾಡಿಕೊಳ್ಳುತ್ತಾರೆ ಎಂದು ನನ್ನ ಭಾವನೆ.

ಅನಂತಕುಮಾರ್ ಅತ್ಯಂತ ಸ್ನೇಹಜೀವಿ; ಯಾವಾಗಲೂ, ಎಂತಹ ಸಂದರ್ಭದಲ್ಲಿಯೂ ಕೂಡ ಅತ್ಯಂತ ಸಮಾಧಾನ ಮತ್ತು ಸಂತೋಷದಿಂದ ಇರುತ್ತಿದ್ದ ನನ್ನ ಸನ್ಮಿತ್ರ. ಅವರದು ಚೈತನ್ಯಶೀಲವಾದ, ಪ್ರೇರಣೆ ಕೊಡುವ ವ್ಯಕ್ತಿತ್ವ. ಅನಂತಕುಮಾರ್ ಅವರನ್ನು ನಾನು 1975 ರಿಂದ ಬಲ್ಲೆ. ನಾವು ಒಂದೇ ಕಾಲೇಜಿನಲ್ಲಿ ಓದಿದವರು. ಪಿ ಸಿ ಜಬೀನ್ ಕಾಲೇಜಿನಲ್ಲಿ ನಾವೆಲ್ಲ ಒಟ್ಟಿಗೆ ಕುಳಿತುಕೊಳ್ಳುತ್ತಿದ್ದೆವು, ಕಾಲೇಜಿನ ಚಟುವಟಿಕೆಗಳಲ್ಲಿ ಒಟ್ಟಿಗೆ ಭಾಗವಹಿಸುತ್ತಿದ್ದೆವು.

ನಾವೆಲ್ಲರೂ ರಾಜಕೀಯವಾಗಿ ಒಂದೇ ರೀತಿಯ ಚಿಂತನೆ ಹೊಂದಿದವರು. ಆ ಕಾಲದಲ್ಲಿ ಲೋಕನಾಯಕ ಜಯಪ್ರಕಾಶ್ ನಾರಾಯಣರ ಸಂಪೂರ್ಣ ಕ್ರಾಂತಿಯಿಂದ ನಾವೆಲ್ಲರೂ ಪ್ರಭಾವಿತರಾಗಿದ್ದೆವು. ಅನಂತಕುಮಾರ್ ಅವರ ಬದುಕಿನಲ್ಲಿಯೂ ಜಯಪ್ರಕಾಶ್ ನಾರಾಯಣ್‌ಅವರ ಬಹಳ ದೊಡ್ಡ ಪ್ರಭಾವವಿದೆ. ತುರ್ತುಪರಿಸ್ಥಿತಿಗೆ ಮೊದಲು ಜಯಪ್ರಕಾಶ್ ನಾರಾಯಣ್ ಅವರ ಸಂಪೂರ್ಣ ಕ್ರಾಂತಿಯ ಕರೆಯನ್ನು ಕೊಟ್ಟಾಗ ನಾವೆಲ್ಲ ಬಹಳಷ್ಟು ಸಕ್ರಿಯವಾಗಿ ಅದರಲ್ಲಿ ಪಾಲ್ಗೊಂಡಿದ್ದೆವು. ತುರ್ತುಪರಿಸ್ಥಿತಿಯ ವಿರುದ್ಧದ ಹೋರಾಟವನ್ನು ನಾವೆಲ್ಲ ರೂಪಿಸಿದ್ದೆವು. ಅನಂತಕುಮಾರ್ ಅವರು ಆ ಹೋರಾಟದ ಮುಂಚೂಣಿಯಲ್ಲಿದ್ದರು. ಅಂದು ನಡೆದ ಒಂದು ಪ್ರತಿಭಟನಾ ಕಾರ್ಯಕ್ರಮದಲ್ಲಿ ಅನಂತಕುಮಾರ್ ಅವರ ಬಂಧನವಾಯಿತು. ಇಂದಿಗೂ ಆ ದೃಶ್ಯ ನನ್ನ ಕಣ್ಣಿಗೆ ಕಟ್ಟಿದಂತಿದೆ. ಬಂಧನವನ್ನು ಅವರು ತಪ್ಪಿಸಿಕೊಳ್ಳಬಹುದಾಗಿತ್ತು. ಆದರೆ " ಈ ದೇಶಕ್ಕಾಗಿ ನಾನು ಜೈಲಿಗೆ ಹೋಗುವುದಕ್ಕೂ ಸಿದ್ಧನಿದ್ದೇನೆ" ಎಂಬ ಅವತ್ತಿನ ಎಲ್ಲ ವಿದ್ಯಾರ್ಥಿಗಳಲ್ಲಿದ್ದ ಮನೋಭಾವನೆಯ ಪ್ರತಿನಿಧಿಯಾಗಿ ಅವರು ಜೈಲಿಗೆ ಹೋಗುವುದನ್ನು ಆಯ್ಕೆ ಮಾಡಿಕೊಂಡರು. ತನ್ಮೂಲಕ ಪ್ರಜಾಪ್ರಭುತ್ವವನ್ನು ಉಳಿಸುವ ಮಹತ್ಕಾರ್ಯವನ್ನು ಅವರು ಮಾಡಿದರು.



ಅಲ್ಲಿಂದ ಪ್ರಾರಂಭವಾದ ಅವರ ಪ್ರಯಾಣ ಎಬಿವಿಪಿ ಮತ್ತು ಭಾರತೀಯ ಜನತಾ ಪಕ್ಷದ ಸಂಘಟನೆಗಳಲ್ಲಿ ಮುಂದುವರಿಯಿತು. ನಮ್ಮ ನಾಯಕರಾದ ಸನ್ಮಾನ್ಯ ಯಡಿಯೂರಪ್ಪನವರ ಹೆಗಲಿಗೆ ಹೆಗಲಾಗಿ ಅವರು ಮಾಡಿರುವ ಹಲವಾರು ಕೆಲಸಗಳು, ಪ್ರತಿಭಟನೆಗಳು, ಮುಂದೆ ನಮ್ಮದೇ ಪಕ್ಷದ ಸರಕಾರ ರಚನೆ, ಇವೆಲ್ಲ ಇತಿಹಾಸದಲ್ಲಿ ದಾಖಲಾಗಿವೆ. ಅವರು ಇಡೀ ದೇಶದ ಉದ್ದಗಲವನ್ನು ಸುತ್ತಾಡಿ ಪಕ್ಷವನ್ನು ಸಂಘಟನೆ ಮಾಡಿದರು. ಯಾರಾದರೂ ನಮ್ಮ ಕಣ್ಣೆದುರೇ ಅತಿ ಎತ್ತರಕ್ಕೆ ಬೆಳೆದು ನಿಂತ ಕನ್ನಡದ ಒಬ್ಬ ರಾಜಕಾರಣಿ ಎನ್ನಬೇಕೆಂದರೆ ಅವರು ಅನಂತಕುಮಾರ್.

ಅನಂತಕುಮಾರ್ ಅವರಲ್ಲಿ ವೈಚಾರಿಕ ಸ್ಪಷ್ಟತೆ ಇತ್ತು. ಅಷ್ಟೇ ವ್ಯಾವಹಾರಿಕವಾಗಿ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದರು. ಹೀಗಾಗಿ ಅವರು ಕೊನೆಗೆ ಸಂಸದೀಯ ವ್ಯವಹಾರ ಸಚಿವರಾಗಿ ಬಹಳ ಅತ್ಯಂತ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದರು. ಜಿ ಎಸ್ ಟಿ ಕಾಯಿದೆಯಿಂದ ಹಿಡಿದು ಸಂವಿಧಾನದ 370 ನೆಯ ವಿಧಿ ರದ್ದತಿಯ ವರೆಗಿನ ಹಲವಾರು ಪ್ರಮುಖ ಕಾಯಿದೆಗಳ ಕರಡನ್ನು ಅವರು ಸಿದ್ಧ ಪಡಿಸಿದ್ದರು. ಅವುಗಳಿಗೆ ಸಂಸತ್ತಿನ ಅನುಮೋದನೆ ಪಡೆಯಲೂ ಅವರು ಪ್ರಮುಖ ಪಾತ್ರ ವಹಿಸಿದ್ದರು.



ತಾವು ಬೆಳೆದ ಊರು ಹುಬ್ಬಳ್ಳಿ ಮತ್ತು ತಮ್ಮ ಕರ್ಮಭೂಮಿಯಾದ ಬೆಂಗಳೂರುಗಳಲ್ಲಿ ಅವರು ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಉಳಿಸಿಹೋಗಿದ್ದಾರೆ. ಅಧಿಕಾರ ಅಥವಾ ಪದವಿ ಅವರ ವ್ಯಕ್ತಿತ್ವವನ್ನು ಎಂದೂ ಬದಲಾವಣೆ ಮಾಡಲಿಲ್ಲ. ಅಧಿಕಾರದಲ್ಲಿದ್ದಾಗಲೂ ಸ್ನೇಹಿತರ ಜೊತೆಗೆ, ನಮ್ಮ ಕಾರ್ಯಕರ್ತರ ಜೊತೆಗೆ, ಇತರ ಯಾರ ಜೊತೆಗೂ ಕೂಡ ಮೊದಲಿನಂತೆಯೇ ಆತ್ಮೀಯವಾದ ಸಂಬಂಧಗಳನ್ನು ಉಳಿಸಿಕೊಂಡಿದ್ದರು. ಅಧಿಕಾರವು ತಮ್ಮ ಸಂಬಂಧಗಳ ಮೇಲೆ ಎಲ್ಲಿಯೂ ಪ್ರಭಾವ ಉಂಟುಮಾಡದಿರುವಂತೆ ಅವರು ಜಾಗ್ರತೆ ವಹಿಸಿದ್ದರು.

ಅನಂತಕುಮಾರರ ಕಾರ್ಯಕ್ರಮಗಳು ಕೇವಲ ಸರ್ಕಾರ ಮತ್ತು ಅಧಿಕಾರಕ್ಕೆ ಸೀಮಿತವಾಗಿರಲಿಲ್ಲ, ಸಮಾಜದ ಸೇವೆಯಲ್ಲಿಯೂ ಅವರ ಕೊಡುಗೆ ಅಪಾರ. ಅವರು ಸ್ಥಾಪಿಸಿದ ಅದಮ್ಯ ಚೇತನ ಎಂಬ ಸೇವಾ ಸಂಸ್ಥೆಯು ಲಕ್ಷಾಂತರ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟವನ್ನು ಒದಗಿಸುವ ಮೂಲಕ ಆಹಾರ ಭದ್ರತೆಯನ್ನು ಒದಗಿಸಿದೆ. ಇದರ ಸೇವಾಕಾರ್ಯ ರಾಜಸ್ಥಾನ, ಕರ್ನಾಟಕ ಮತ್ತು ಇತರ ರಾಜ್ಯಗಳಿಗೂ ವ್ಯಾಪಿಸಿದೆ. ನಾನು ಒಮ್ಮೆ, "ಇಷ್ಟೊಂದು ಜನರಿಗೆ ಊಟ ಕೊಡುವ ಹೊಣೆಗಾರಿಕೆ ತೆಗೆದುಕೊಂಡಿದ್ದೀರಿ, ಏಕೆ?" ಎಂದು ಅನಂತಕುಮಾರ್ ಅವರನ್ನು ಕೇಳಿದ್ದೆ. ಅದಕ್ಕವರು "ನನಗೆ ಲಕ್ಷಾಂತರ ಜನ ಮಕ್ಕಳಿದ್ದಾರೆ, ಈ ನನ್ನ ಲಕ್ಷಾಂತರ ಜನ ಮಕ್ಕಳಿಗೆ ಆಹಾರವನ್ನು ಒದಗಿಸುವುದು ನನ್ನ ಕರ್ತವ್ಯ" ಎಂದು ಹೇಳಿದ್ದರು.

ಅದೇ ರೀತಿ, ಅವರು ಪ್ರಾರಂಭಿಸಿದ "ಸಸ್ಯಾಗ್ರಹ" ಇನ್ನೊಂದು ದೊಡ್ಡ ಕಾರ್ಯಕ್ರಮ. ನನ್ನನ್ನು ಕೂಡ ಎರಡು ಮೂರು ಕಾರ್ಯಕ್ರಮಗಳಿಗೆ ಕರೆದಿದ್ದರು. ಬೆಂಗಳೂರಿನಲ್ಲಿ ಎಲ್ಲೆಲ್ಲಿ ಜಾಗವಿದೆ, ಗಿಡ ನೆಡಲು ಅನುಕೂಲವಿದೆ, ಅಲ್ಲೆಲ್ಲ ಸಸ್ಯಗಳನ್ನು ನೆಡುವ ಮುಖಾಂತರ ಒಂದು ದೊಡ್ಡ ಆಂದೋಲನವನ್ನೇ ರೂಪಿಸಿದರು. ಪ್ರತಿ ಶನಿವಾರ ಮತ್ತು ರವಿವಾರ ಆ ಕೆಲಸವನ್ನು ನಿರಂತರವಾಗಿ ಮಾಡುತ್ತ ಬಂದರು. ಒಬ್ಬ ರಾಜಕಾರಣಿಯು ಕೇವಲ ರಾಜಕಾರಣ ಅಥವಾ ಕೇವಲ ಸರಕಾರದ ಕೆಲಸ ಮಾಡಿಕೊಂಡಿದ್ದರೆ ಸಾಲದು. ಜೊತೆಗೆ ಈ ತರಹದ ಜನಪರವಾದ ಕೆಲಸಗಳನ್ನೂ ಮಾಡುವ ಹವ್ಯಾಸ ಅವನಿಗಿರಬೇಕು. ಆಗ ಅವನು ನಿವೃತ್ತನಾಗುವುದೂ ಇಲ್ಲ, ದಣಿಯುವುದೂ ಇಲ್ಲ. ಇಂತಹ ಒಂದು ಮಾದರಿಯನ್ನು ಅನಂತಕುಮಾರ್ ಅವರು ಬಿಟ್ಟು ಹೋಗಿದ್ದಾರೆ.

ಅವರು ರಾಷ್ಟ್ರಮಟ್ಟದಲ್ಲಿ ವಾಜಪೇಯಿಯವರ ಸರ್ಕಾರದಲ್ಲಿ ಹಲವಾರು ಖಾತೆಗಳನ್ನು ನಿಭಾಯಿಸಿದ್ದಾರೆ. ಅವರು ವಾಯುಯಾನ ಖಾತೆಯಿಂದ ಹಿಡಿದು, ಬಡತನ ನಿರ್ಮೂಲನ ಖಾತೆಯವರೆಗೆ ಅಂದರೆ ಭೂಮಿಯಿಂದ ಆಕಾಶದ ವರೆಗಿನ ಎಲ್ಲ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. ನರೇಂದ್ರ ಮೋದಿಯವರ ಸರಕಾರದಲ್ಲಿಯೂ ಸಚಿವರಾದ ಅವರನ್ನು ನಾವು ರೈತರಿಗಾಗಿ ಬೇವುಲೇಪಿತ ಯೂರಿಯಾ, ಕಡಿಮೆ ಬೆಲೆಗೆ ರಸಗೊಬ್ಬರದ ಲಭ್ಯತೆ, ಜನೌಷಧಿಯ ಮೂಲಕ ಕಡಿಮೆ ಬೆಲೆಗೆ ಔಷಧಿಗಳ ಲಭ್ಯತೆ ಮುಂತಾದ ಹಲವಾರು ಜನಪರ ಉಪಕ್ರಮಗಳಿಗಾಗಿ ಸದಾ ನೆನಪಿಸಿಕೊಳ್ಳುತ್ತೇವೆ.

ಅನಂತಕುಮಾರರು ನಮಗೆ ಸದಾಕಾಲದ ಪ್ರೇರಣೆ. ವಿವೇಕಾನಂದರು ಹೇಳಿದಂತೆ "ಸಾಧಕನಿಗೆ ಸಾವು ಅಂತ್ಯವಲ್ಲ, ಸಾವಿನ ನಂತರವೂ ಸಾಧಕರು ಬದುಕುತ್ತಾರೆ". ಈ ಮಾತಿಗೆ ಉತ್ತಮ ಉದಾಹರಣೆ ಅನಂತಕುಮಾರ್ ಅವರು. ಅನಂತಕುಮಾರ್ ಅವರ ಜೀವನವೇ ಸೇವಾ ಜೀವನ. ಅವರ ಸಂಬಂಧಗಳೆಲ್ಲವೂ ಕೂಡ ಸೇವೆಯಿಂದಲೇ ಜೋಡಿಸಿಕೊಂಡಿವೆ ಎಂಬುದನ್ನು ನಾವು ಎಂದಿಗೂ ಮರೆಯಬಾರದು. ಅವರು ನಡೆದು ತೋರಿಸಿದ ದಾರಿಯಲ್ಲಿ ನಡೆಯುವುದೇ ನಾವು ಅವರಿಗೆ ಸಲ್ಲಿಸುವ ಗೌರವ.

ಅದೇ ದಾರಿಯಲ್ಲಿ ತೇಜಸ್ವಿನಿ ಅನಂತಕುಮಾರ್ ಅವರು ನಡೆಯುತ್ತಿದ್ದಾರೆ. ಇನ್ನೂ ಹೆಚ್ಚಿನ ಮಟ್ಟದ ಸೇವಾಕಾರ್ಯಗಳನ್ನು ಕೈಗೊಂಡಿದ್ದಾರೆ. ತನ್ಮೂಲಕ ನಮಗೆಲ್ಲರಿಗೂ ಪ್ರೇರಣಾದಾಯಿಯಾಗಿದ್ದಾರೆ. ಮಾನ್ಯ ಯಡಿಯೂರಪ್ಪನವರು ಅದಮ್ಯ ಚೇತನ ಸಂಸ್ಥೆಗೆ ನೀಡಿದ ಬೆಂಬಲವನ್ನು ನಮ್ಮ ಸರಕಾರವೂ ಮುಂದುವರಿಸಿಕೊಂಡು ಹೋಗುತ್ತದೆ. ಅನಂತಕುಮಾರರ ಬದುಕು, ವ್ಯಕ್ತಿತ್ವಗಳು ನಮಗೆ ಸದಾ ಪ್ರೇರಣೆ ನೀಡುತ್ತಿರಲೆಂದು ನಾನು ಆಶಿಸುತ್ತೇನೆ.

# ಆಧುನಿಕತೆ - ಪರಂಪರೆಗಳ ಆದರ್ಶ ಮಿಶ್ರಣವಾಗಿದ್ದ ಅನಂತಕುಮಾರ್

ಪುಟ 1 ರಿಂದ ನನ್ನ ಅಧ್ಯಕ್ಷತೆಯ ಅವಧಿಯಲ್ಲಿ ಅವರು ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದರು.

ಅವರು ಆಕರ್ಷಕ ರಾಜಕಾರಣಿಯಾಗಿದ್ದುದರ ಜೊತೆಗೆ ಸಂಘಟನಾತ್ಮಕ ವ್ಯಕ್ತಿಯೂ ಆಗಿದ್ದರು. ಅವರು ಸತತವಾಗಿ ಅನೇಕ ಅವಧಿಗೆ ಬೆಂಗಳೂರಿನಿಂದ ಲೋಕಸಭೆಗೆ ಸಂಸದರಾಗಿ ಆಯ್ಕೆಯಾದರು. ಆದರೆ ತಮ್ಮ ಈ ಸಾಧನೆಯ ಬಗ್ಗೆ ಅವರಲ್ಲಿ ಇನಿತೂ ಅಹಂಕಾರವಿರಲಿಲ್ಲ. ತಾವು ಏನೇ ಆಗಿದ್ದರೂ ಅದಕ್ಕೆಲ್ಲ ಪಕ್ಷವು ನೀಡಿದ ಅವಕಾಶಗಳೇ ಕಾರಣ ಎಂದು ಅವರು ಬಲವಾಗಿ ನಂಬಿದ್ದರು. ಅನಂತಕುಮಾರರು ಆಧುನಿಕತೆ ಮತ್ತು ಪರಂಪರೆಗಳ ಆದರ್ಶ ಮಿಶ್ರಣವಾಗಿದ್ದರು. ಅವರು ಜನಪ್ರಿಯ ರಾಜಕೀಯ ನಾಯಕರಾಗಿದ್ದರು. ವಿಶ್ವ ಸಂಸ್ಥೆಯಲ್ಲಿ ಕನ್ನಡದಲ್ಲಿ ಭಾಷಣ ಮಾಡಿದ ಮೊದಲ ಮತ್ತು ಏಕೈಕ ವ್ಯಕ್ತಿಯಾಗಿ ಅವರು ಸದಾ ನೆನಪಿನಲ್ಲಿರುತ್ತಾರೆ.

ಅವರು ತಮ್ಮ ಸ್ನೇಹಶೀಲ, ಸಹಜ ಮತ್ತು ಹೊಂದಿಕೊಳ್ಳುವ ಸ್ವಭಾವದ ಜೊತೆಗೆ ಪ್ರಾಮಾಣಿಕ ವ್ಯಕ್ತಿತ್ವದಿಂದ ಪಕ್ಷದ ಕೇಂದ್ರೀಯ ನಾಯಕತ್ವಕ್ಕೆ ಸದಾ ಹತ್ತಿರದವರಾಗಿದ್ದರು. ಅಟಲ್ ಬಿಹಾರಿ ವಾಜಪೇಯಿಯವರ ಕಾಲವಿರಲಿ, ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರ ಕಾಲವಿರಲಿ, ಪದವಿಗಿಂತ ಹೆಚ್ಚಾಗಿ ತಮ್ಮ ಕರ್ತವ್ಯಕ್ಕೆ ಆದ್ಯತೆ ಮತ್ತು ಮಹತ್ವ ನೀಡುವ ಅವರ ಸ್ವಭಾವ ಎಲ್ಲರಿಗೂ ಪ್ರೇರಣಾದಾಯಕವಾಗಿತ್ತು. ಅವರು ತಮಗೆ ವಹಿಸಿದ ಯಾವುದೇ ಜವಾಬ್ದಾರಿಯನ್ನೂ ಸಂಪೂರ್ಣ ಪ್ರಾಮಾಣಿಕತೆಯಿಂದ ನಿರ್ವಹಿಸಿದರು. ತಮ್ಮ 59 ವರ್ಷಗಳ ಬದುಕಿನಲ್ಲಿ ಅಪಾರವಾದ ಸಾಧನೆಯನ್ನು ಅವರು ಮಾಡಿದರು ಎಂದು ನನ್ನ ಅಭಿಪ್ರಾಯ. ಅವೆಲ್ಲ ಸಾಧನೆಗಳಿಗೆ ಆಧಾರವಾಗಿದ್ದದ್ದು ಅವರ ಕಠಿಣ ಪರಿಶ್ರಮ, ನಿಯತ್ತು ಮತ್ತು ಪ್ರಾಮಾಣಿಕ ಪ್ರಯತ್ನಗಳು.

ಅವರ ಯೋಗ್ಯತೆ, ಕುಶಲತೆ ಮತ್ತು ಪರಿಶ್ರಮಗಳನ್ನು ಗಮನಿಸಿದ ಪ್ರಧಾನ ಮಂತ್ರಿ ಮೋದಿಯವರು ಅವರಿಗೆ ಪರಿಶ್ರಮವನ್ನು ಅಪೇಕ್ಷಿಸುವ ಅನೇಕ ಜವಾಬ್ದಾರಿಗಳನ್ನು ವಹಿಸಿದರು. ರಸಗೊಬ್ಬರ ಮತ್ತು ರಾಸಾಯನಿಕ ಖಾತೆಯ ಜೊತೆಗೆ ಸಂಸದೀಯ ವ್ಯವಹಾರಗಳ ಖಾತೆಯನ್ನೂ ಅವರಿಗೆ ವಹಿಸಿದರು. ರಸಗೊಬ್ಬರ ಮತ್ತು ರಾಸಾಯನಿಕ ಖಾತೆಯ ಮಂತ್ರಿಯಾಗಿದ್ದಾಗ ದೇಶದಲ್ಲಿ ರಸಗೊಬ್ಬರದ ಕೊರತೆಗೆ ಸೂಕ್ತ ಪರಿಹಾರವನ್ನು ನೀಡಿದ್ದು ಅವರ ಅತ್ಯುತ್ತಮ ಸಾಧನೆ. ಅವರು ಮಂತ್ರಿಯಾಗಿದ್ದಾಗ ರೈತರ ಈ ದೀರ್ಘಕಾಲದ ಸಮಸ್ಯೆ ಪರಿಹಾರವಾಯಿತು. ಅವರ ಕಾಲದಲ್ಲಿ ದೇಶದಲ್ಲಿ ದಾಖಲೆ ಪ್ರಮಾಣದ ರಸಗೊಬ್ಬರ ಉತ್ಪಾದನೆಯಾಯಿತು. ಜೊತೆಗೆ, ರಸಗೊಬ್ಬರವನ್ನು ದೇಶದ ಮೂಲೆಮೂಲೆಗೂ ಕಾಲಕ್ಕೆ ಸರಿಯಾಗಿ ಸುಗಮವಾಗಿ ತಲುಪುವ ವ್ಯವಸ್ಥೆಯನ್ನೂ ಅವರು ಮಾಡಿದರು. ಅವರ ಪ್ರಯತ್ನಗಳ ಫಲವಾಗಿಯೇ ದೇಶದ ಜನತೆಗೆ ಕಡಿಮೆ ಬೆಲೆಗೆ ಔಷಧಿಗಳನ್ನು ಒದಗಿಸುವ ಜನೌಷಧಿ ಯೋಜನೆ ಬಲಗೊಂಡಿತು. ಹೃದಯದ ಚಿಕಿತ್ಸೆಗೆ ಬಳಸುವ ಸ್ಟೆಂಟುಗಳ ದರದಲ್ಲಿ ಶೇ 70 ರಷ್ಟು ಕಡಿಮೆಯಾಯಿತು. ಸಂಸದೀಯ ವ್ಯವಹಾರಗಳ ಖಾತೆಯನ್ನೂ ಅವರು ದಕ್ಷತೆಯಿಂದ ನಿರ್ವಹಿಸಿದರು. ಅವರಿಗೆ ಎಲ್ಲ ಪ್ರಮುಖ ರಾಜಕೀಯ ಪಕ್ಷಗಳ ನಾಯಕರ ಜೊತೆ ಉತ್ತಮ ಸಂಬಂಧವಿತ್ತು. ವಿರೋಧ ಪಕ್ಷಗಳ ಸದಸ್ಯರೊಂದಿಗೂ ಅವರು ಉತ್ತಮ ಸಂಪರ್ಕವಿರಿಸಿಕೊಂಡಿದ್ದರು. ಅದರ ಲಾಭವನ್ನು ಸಂಸತ್ತಿನ ಕಾರ್ಯನಿರ್ವಹಣೆಯಲ್ಲಿ ನಾವು ಗಮನಿಸಬಹುದು.

ಕಾಯಿಲೆಯೊಂದಿಗೆ ಜೀವನ್ಮರಣ ಹೋರಾಟ ಮಾಡುವ ಸಂದರ್ಭ ಬಂದೊದಗದಿದ್ದರೆ ಅವರು ರಾಜಕೀಯದಲ್ಲಿ ಇನ್ನಷ್ಟು ಔನ್ನತ್ಯವನ್ನು ಸಾಧಿಸುತ್ತಿದ್ದರು ಎಂದು ನನ್ನ ಅಭಿಪ್ರಾಯ. ಆದರೆ ಅನಿವಾರ್ಯವಾದದ್ದು ಘಟಿಸಿಹೋಯಿತು. ಅವರ ಅನುಪಸ್ಥಿತಿಯು ನಮಗೆಲ್ಲರಿಗೂ ಮೂರು ವರ್ಷಗಳ ನಂತರವೂ ಕಾಡುತ್ತಿದೆ. ಈ ಕೊರತೆಯನ್ನು ತುಂಬುವುದು ಕಷ್ಟ. ಆದರೆ ಜೀವನಚಕ್ರವನ್ನು ನಿರಂತರವಾಗಿ ಮುಂದುವರಿಸಲೇ ಬೇಕು. ಅನಂತಕುಮಾರರ ಪತ್ನಿ, ಶ್ರೀಮತಿ ತೇಜಸ್ವಿನಿ ಅನಂತಕುಮಾರರು ಅವರ ಕೆಲಸ ಮತ್ತು ಹೆಸರು ಎರಡನ್ನೂ ಜೀವಂತವಾಗಿರಿಸುವ ಕೆಲಸ ಮಾಡುತ್ತಿದ್ದಾರೆನ್ನುವುದು ಸಂತೋಷದ ವಿಷಯ. ಅವರು ಪ್ರತಿ ವರ್ಷ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದಾರೆ. ಕೆಲವೊಮ್ಮೆ ಮಕ್ಕಳ ಕಾರ್ಯಕ್ರಮ, ಕೆಲವೊಮ್ಮೆ ಮಹಿಳಾ ಸಬಲೀಕರಣ ಮತ್ತು ಕೆಲವೊಮ್ಮೆ ಪರಿಸರ ಸಮಸ್ಯೆಗಳನ್ನು ತೆಗೆದುಕೊಂಡು ಜಾಗೃತಿ ಮೂಡಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಇದಕ್ಕಾಗಿ ಅವರನ್ನು ಎಷ್ಟು ಪ್ರಶಂಸೆ ಮಾಡಿದರೂ ಸಾಲದು. ಅವರ ಎಲ್ಲ ಕಾರ್ಯಕ್ರಮಗಳಿಗೂ ನಾವು ಸಂಪೂರ್ಣ ಬೆಂಬಲವನ್ನು ನೀಡುತ್ತೇವೆ. ಅನಂತಕುಮಾರರ ನೆನಪಿನಲ್ಲಿ ಆಯೋಜಿಸಿರುವ ಎಲ್ಲ ಕಾರ್ಯಕ್ರಮಗಳೂ ಯಶಸ್ವಿಯಾಗಲೆಂದು ಹಾರೈಸುತ್ತೇನೆ.

# ವಿಶ್ವಾಸಕ್ಕೆ ಮತ್ತೊಂದು ಹೆಸರು ಅನಂತಕುಮಾರ್

**ಶ್ರೀ ಕೆ ಎಸ್ ಈಶ್ವರಪ್ಪ**
ಸಚಿವರು, ಕರ್ನಾಟಕ ಸರ್ಕಾರ

ನಾವೆಲ್ಲರೂ ರಾಜಕೀಯದಲ್ಲಿ ಇಂದಿನ ಸ್ಥಿತಿಗೆ ಬರಲು, ರಾಜ್ಯದಲ್ಲಿ ಭಾರತೀಯ ಜನತಾ ಪಕ್ಷದ ಸರ್ಕಾರ ಬರಲು, ನಾವೆಲ್ಲ ಮಂತ್ರಿಗಳಾಗಲು ಕಾರಣ ಅನಂತಕುಮಾರ್ ಅವರೇ ಎಂದು ಹೇಳಲು ನನಗೆ ಬಹಳ ಸಂತೋಷವಾಗುತ್ತದೆ. ಅನಂತಕುಮಾರ್ ಅವರು ಸಂಘಟನೆಗೆ ಮಾಡಿದ ಪ್ರಯತ್ನಗಳಿಂದ ರಾಜ್ಯದಲ್ಲಿ ನಮ್ಮಂತಹ ಸಾವಿರಾರು ಜನ ಕಾರ್ಯಕರ್ತರು ಬೆಳೆದರು.

ಯಡಿಯೂರಪ್ಪನವರು ಎಮ್ ಎಲ್ ಎ ಆದ ಕಾಲದಲ್ಲಿ ಅನಂತಕುಮಾರ್ ಅವರು ರಾಜ್ಯದ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳಾಗಿದ್ದರು. ಆ ಸಂದರ್ಭದಲ್ಲಿ ಶಾಸಕರ ಭವನದಲ್ಲಿ ಯಡಿಯೂರಪ್ಪನವರು,ಅನಂತಕುಮಾರ್ ಮತ್ತು ನಾನು ಮೂರೇ ಜನ ಕುಳಿತು ಪಕ್ಷದ ಬಗ್ಗೆ ಚರ್ಚಿಸುತ್ತಿದ್ದೆವು. ಅನಂತಕುಮಾರ್ ಅವರು ಯೋಚನೆ ಮಾಡಿ ಹೋರಾಟಗಳ ಬಗ್ಗೆ ಯೋಜನೆಗಳನ್ನು ನಿರೂಪಿಸುತ್ತಿದ್ದರು. ಹೋರಾಟಗಳನ್ನು ಬಗ್ಗೆ ಯಡಿಯೂರಪ್ಪನವರು ಸಂಘಟಿಸುತ್ತಿದ್ದರು. ಹೀಗೆ ಅನಂತಕುಮಾರ್ ಅವರೇ ಯೋಜನೆಗಳ ರೂವಾರಿಯಾಗಿದ್ದರು.

ಕರ್ನಾಟಕ ರಾಜ್ಯದಲ್ಲಿ ಇವತ್ತು ರಾಜ್ಯದ ಪ್ರತಿಯೊಬ್ಬ ಕಾರ್ಯಕರ್ತನ ಹೆಸರು ಹಿಡಿದು ಹೇಳಬಲ್ಲ ನಾಯಕರು ಯಾರೂ ಇಲ್ಲ. ಆದರೆ ಅನಂತಕುಮಾರ್ ಇಡೀ ರಾಜ್ಯದ ಯಾವುದೇ ಮೂಲೆಯ ಯಾವ ಹಳ್ಳಿಗೆ ಹೋದರೂ ಅಲ್ಲಿನ ಕಾರ್ಯಕರ್ತನ ಹೆಸರು ಹಿಡಿದು ಮಾತನಾಡಿಸುತ್ತಿದ್ದರು. ಅಂತಹ ಅನಂತಕುಮಾರ್ ಅವರು ಇವತ್ತು ನಮ್ಮ ನಡುವೆ ಇಲ್ಲ. ಆದರೆ ಅವರ ಸ್ಮರಣೆ ನಮ್ಮಲ್ಲಿ ಚಿರವಾಗಿ ಉಳಿದುಕೊಂಡಿದೆ.

ಪ್ರತಿಯೊಬ್ಬ ಕಾರ್ಯಕರ್ತನನ್ನೂ ವಿಶ್ವಾಸದಿಂದ ಮಾತನಾಡಿಸಿದರೆ ಅದೇ ಅನಂತಕುಮಾರ್ ಅವರಿಗೆ ನಾವು ಅರ್ಪಿಸುವ ಶ್ರದ್ಧಾಂಜಲಿ. ಸಾಮಾನ್ಯ ಕಾರ್ಯಕರ್ತನಿಗೆ ಸಂಘಟನೆಯ ಜವಾಬ್ದಾರಿ ಬೇಡ, ಅವನಿಗೆ ಸರ್ಕಾರದಲ್ಲಿ ಜವಾಬ್ದಾರಿ ಬೇಡ, ಪ್ರೀತಿ ವಿಶ್ವಾಸದಿಂದ ಮಾತಾಡಿಸಿಬಿಟ್ಟರೆ ಅದು ಅನಂತಕುಮಾರ್ ಅವರಿಗೆ ಗೌರವ ಕೊಡುವ ವ್ಯವಸ್ಥೆ ಎಂದು ನಾನು ಭಾವಿಸುತ್ತೇನೆ. ಅನಂತಕುಮಾರ್ ಜೊತೆಗೆ ನಾವೆಲ್ಲರೂ ಕೂಡ ಬೆಳೆಯುತ್ತಿರುವ ಸಂದರ್ಭದಲ್ಲಿ ಅವರು ರೂಪಿಸಿದ ಯೋಜನೆಗಳನ್ನು ನೆನಪು ಮಾಡಿಕೊಂಡರೆ ನಮಗೆ ತುಂಬಾ ಸಂತೋಷವಾಗುತ್ತದೆ. ವಿಧಾನಸಭೆಯಲ್ಲಿ ಯಾವ ರೀತಿ ಹೋರಾಟಗಳನ್ನು ನಡೆಸಬೇಕು, ವಿಧಾನಸಭೆಯ ಹೊರಗಡೆ ಯಾವ ರೀತಿ ಹೋರಾಟಗಳನ್ನು ನಡೆಸಬೇಕು ಎಂಬ ಬಗ್ಗೆ ಸ್ಪಷ್ಟವಾಗಿ ಯೋಚಿಸುವ ಅವರು ಪ್ರತಿಯೊಬ್ಬ ಕಾರ್ಯಕರ್ತನಿಗೂ ಸ್ಫೂರ್ತಿಯಾಗಿದ್ದರು. ಇಡೀ ರಾಜ್ಯದ ಕಾರ್ಯಕಾರಿ ಸಮಿತಿಯ ಸಭೆಯನ್ನು ಕರೆಯುವುದಕ್ಕಿಂತ ಮೊದಲು ಹೋರಾಟದ ಬಗ್ಗೆ ನಿರ್ಧಾರವನ್ನು ತೆಗೆದುಕೊಂಡು ಅದಕ್ಕೆ ಬೇಕಾದ ಕರಪತ್ರ, ಬ್ಯಾನರುಗಳು ಮುಂತಾದ ಸಾಧನಗಳನ್ನು ತಯಾರು ಮಾಡಿ ಪ್ರತಿ ಜಿಲ್ಲೆಗೆ ಇಂತಿಷ್ಟು ಎಂದು ಕಟ್ಟಿ ಇಡುತ್ತಿದ್ದೆವು. ಕಾರ್ಯಕಾರಿ ಸಮಿತಿಯ ಸಭೆಯನ್ನು ಕರೆದೆವೆಂದರೆ ಏನೋ ಒಂದು ಹೋರಾಟವಿದೆ ಎಂದು ಸದಸ್ಯರು ತಿಳಿದುಕೊಂಡು ಬಿಡುತ್ತಿದ್ದರು. ಪಕ್ಷದ ಸದಸ್ಯರಿಗೆ ನಮ್ಮ ಮೂವರ ಮೇಲೆ ಅಷ್ಟು ವಿಶ್ವಾಸವಿತ್ತು. ಅವರು ಹೋರಾಟದ ಮೂಲಕವೇ ಪಕ್ಷವನ್ನು ಬೆಳೆಸುತ್ತ ಬಂದರು.



ಅಂದು ಕಾರ್ಯಕರ್ತರ ನಡುವೆ ಅಪನಂಬಿಕೆ ಇರಲಿಲ್ಲ. ಇಂದು ಭಾರೀ ದೊಡ್ಡ ದೊಡ್ಡವರು ದೊಡ್ಡ ದೊಡ್ಡ ಸ್ಥಾನದಲ್ಲಿ ಕುಳಿತಿದ್ದರೂ ಕೂಡ ಎಲ್ಲೋ ಒಂದು ಕಡೆ "ಇವರು ನನ್ನನ್ನು ಯಾಕೆ ನಂಬುತ್ತಿಲ್ಲ" ಎಂಬ ಅಳುಕು ಇದ್ದೇ ಇದೆ. ಹಾಗಿರುವಾಗ "ನಾನು ಯಾಕೆ ಇವರನ್ನು ನಂಬಬೇಕು" ಎಂಬಂತಹ ಭಾವನೆಗಳು ಕಾರ್ಯಕರ್ತರ ನಡುವೆ, ದೊಡ್ಡ ದೊಡ್ಡವರ ನಡುವೆ ಇರುವುದನ್ನು ಕಾಣುತ್ತಿದ್ದೇವೆ. ಇಂತಹ ಸ್ಥಿತಿ ದೂರವಾಗಬೇಕು. ಅಂದು ಕಾರ್ಯಕರ್ತರ ಮಧ್ಯೆ ಏನೇ ಸಮಸ್ಯೆಗಳಿದ್ದರೂ ಅನಂತಕುಮಾರ್ ಅವರನ್ನು ಕರೆದು ಸ್ಪಷ್ಟವಾಗಿ ಮಾತಾಡುತ್ತಿದ್ದರು. ಇಂದು ತಮ್ಮ ಸಮಸ್ಯೆಗಳನ್ನು ಯಾರ ಬಳಿ ಹೇಳಿಕೊಳ್ಳಲಿ ಎಂಬ ಸಂಕಟವನ್ನು ಕಾರ್ಯಕರ್ತರು ಅನುಭವಿಸುತ್ತಿದ್ದಾರೆ. ಇಂದು ಕರ್ನಾಟಕ ರಾಜ್ಯದಲ್ಲಿ ಅನಂತಕುಮಾರ್ ಒಬ್ಬ ಬುದ್ಧಿವಂತ ರಾಜಕಾರಣಿ, ಸಂಘಟನೆಗೆ ಒಬ್ಬ ನಂಬಿಕಸ್ಥ ವ್ಯಕ್ತಿ ಎಂಬುದು ಮನೆಮಾತಾಗಿದೆ. ಅವರ ಹತ್ತಿರ ಹೋಗಿ ಕುಳಿತರೆ ತಮ್ಮ ಅನೇಕ ಸಮಸ್ಯೆಗಳು ಪರಿಹಾರವಾಗುತ್ತವೆ ಎಂಬ ವಿಶ್ವಾಸವನ್ನು ಸಂಘದ ಕಾರ್ಯಕರ್ತರು ಹೊಂದಿದ್ದರು. ಅವರು ನಮ್ಮೊಡನೆ ಯಾವುದೇ ಸಂಕೋಚವಿಲ್ಲದೆ ಸಹೋದರನಂತೆ ವ್ಯವಹರಿಸುತ್ತಿದ್ದರು.

ಇಂದು ನಾವು ಅನೇಕ ನಗರಪಾಲಿಕೆಗಳಲ್ಲಿ ಅಧಿಕಾರದಲ್ಲಿದ್ದೇವೆ. ಅನೇಕ ಕಡೆ ಎಮ್ಎಲ್ಎಗಳಾಗಿ ಆಯ್ಕೆಯಾಗಿದ್ದೇವೆ. ಸರಕಾರ ರಚಿಸಿದ್ದೇವೆ, ನಮ್ಮಲ್ಲಿ ಅನೇಕರು ಮಂತ್ರಿಗಳಾಗಿದ್ದೇವೆ, ಉನ್ನತ ಸ್ಥಾನದಲ್ಲಿದ್ದೇವೆ. ಆದರೆ ಬಹಳ ಜನರಿಗೆ ತೃಪ್ತಿ ಎನ್ನುವುದು ಇಲ್ಲ. ಏಕೆಂದರೆ ನಮ್ಮಲ್ಲಿ ಪರಸ್ಪರ ವಿಶ್ವಾಸದ ಕೊರತೆಯಿದೆ. ಈ ವಿಶ್ವಾಸಕ್ಕೆ ಮತ್ತೊಂದು ಹೆಸರು. ಅನಂತಕುಮಾರ್ ಎಂದರೆ ವಿಶ್ವಾಸ, ವಿಶ್ವಾಸ ಎಂದರೆ ಅನಂತಕುಮಾರ್.

ಅನೇಕ ಹೋರಾಟಗಳ ಜೊತೆಗೆ ಅನಂತಕುಮಾರ್ ಅವರು ಸೇವಾ ಚಟುವಟಿಕೆಗಳಿಗೆ ಹೆಚ್ಚಿನ ಒತ್ತು ಕೊಡುತ್ತಿದ್ದರು. ಅದಮ್ಯ ಚೇತನ ಸಂಸ್ಥೆಗೆ ಅನಂತಕುಮಾರ್ ಅವರೇ ಸ್ಫೂರ್ತಿ. ಈ ಸಂಸ್ಥೆಯು ನಡೆಸುತ್ತಿರುವ ಚಟುವಟಿಕೆಗಳನ್ನು ನೋಡಿ ಇಂದಿಗೂ ಇಡೀ ದೇಶವೇ ಸಂತೋಷ ಪಡುತ್ತಿದೆ.

# ಕಾರ್ಯಕರ್ತರ ಕಣ್ಮಣಿ

ಶ್ರೀ ಬಿ.ಸಿ.ನಾಗೇಶ್
ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ



ಅನಂತಕುಮಾರ್ ಮತ್ತು ನನ್ನ ನಡುವೆ ಮೂರು ತಲೆಮಾರುಗಳ ಸಂಬಂಧ. ನನ್ನ ತಾಯಿ ಮತ್ತು ಅವರ ತಂದೆ ಒಟ್ಟಿಗೆ ಓದಿದವರು. ನನ್ನ ಅಜ್ಜ ಮತ್ತು ಅವರ ಅಜ್ಜ ಶ್ರೀಕಂಠ ಶಾಸ್ತ್ರಿಗಳಿಬ್ಬರೂ ತಿಪಟೂರಿನಲ್ಲಿ ವಾಸವಾಗಿದ್ದರು. ಆದರೆ ಇವೆಲ್ಲ ನಮ್ಮಿಬ್ಬರಿಗೂ ತಿಳಿದದ್ದು ನಾನು ವಿದ್ಯಾರ್ಥಿ ಪರಿಷತ್ ಸೇರಿದ ಮೇಲೆಯೇ!

ಅನಂತಕುಮಾರರು ನಮ್ಮಂತಹ ಕಿರಿಯರನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ತಮ್ಮ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಅವಕಾಶ ಕೊಡುವ ಮೂಲಕ ಮತ್ತು ಮಹಾನ್ ವ್ಯಕ್ತಿಗಳನ್ನು ಭೇಟಿಯಾಗಲು ಹೋಗುವಾಗ ನಮ್ಮನ್ನೂ ತಮ್ಮ ಜೊತೆ ಕರೆದುಕೊಂಡು ಹೋಗುವ ಮೂಲಕ ಮಹಾನ್ ವ್ಯಕ್ತಿಗಳು ಹೇಗೆ ಆದರ್ಶಮಯ ಜೀವನವನ್ನು ನಡೆಸುತ್ತಾರೆ, ಅವರೆದುರು ನಾವಿನ್ನೂ ಎಷ್ಟು ಚಿಕ್ಕವರು ಎಂಬುದನ್ನು ಪ್ರತ್ಯಕ್ಷವಾಗಿ ತಿಳಿಯಲು ನಮಗೆ ಅವಕಾಶ ಮಾಡಿಕೊಟ್ಟರು.

ಅವರು ನನ್ನನ್ನು ಒಂದು ದಿನ ರಾತ್ರಿ **11:30** ಕ್ಕೆ ಅದ್ವಾನಿಯವರ ಕಛೇರಿಗೆ ಕರೆದುಕೊಂಡು ಹೋಗಿದ್ದರು. ಆ ಇಳಿ ವಯಸ್ಸಿನಲ್ಲಿಯೂ ಅದ್ವಾನಿಯವರು ದೇಶಕ್ಕೋಸ್ಕರ ಹೇಗೆ ಕೆಲಸ ಮಾಡುತ್ತಾರೆ ಎಂಬುದನ್ನು ಗಮನಿಸಿ ಯಾರಿಂದಲೂ ಹೇಳಿಸಿಕೊಳ್ಳದೆ ದೇಶದ ಕೆಲಸವನ್ನು ಮಾಡಬೇಕು ಎಂಬ ಪಾಠವನ್ನು ನಮಗೆ ಅನಂತಕುಮಾರ್ ಅವರು ಅಂತಹ ಭೇಟಿಗಳ ಮೂಲಕ ಹೇಳಿಕೊಡುತ್ತಿದ್ದರು. ಈ ತರಹ ಹೆಜ್ಜೆ ಹೆಜ್ಜೆಗೂ ನನ್ನನ್ನು ಪ್ರೋತ್ಸಾಹಿಸಿದ ಅನಂತಕುಮಾರರು **2004** ರಲ್ಲಿ ನಾನು ಅನಿವಾರ್ಯವಾಗಿ ಚುನಾವಣೆಗೆ ನಿಲ್ಲಲೇಬೇಕಾದ ಪರಿಸ್ಥಿತಿಯನ್ನು ಉಂಟು ಮಾಡಿದರು. ನನಗೆ ಅಧಿಕಾರ ರಾಜಕಾರಣ ನನಗೆ ಇಷ್ಟವಿಲ್ಲ ಎಂದು ಚುನಾವಣೆಯಲ್ಲಿ ಸ್ಪರ್ಧಿಸಲು ನಿರಾಕರಿಸಿದಾಗ ಅವರು ಬಿಡದೆ ಬಲವಂತವಾಗಿ ಸ್ಪರ್ಧಿಸುವಂತೆ ಮಾಡಿದ್ದಲ್ಲದೆ ಸಾರ್ವಜನಿಕ ಸಭೆಗಳಲ್ಲಿ ಹೇಗೆ ಮಾತಾಡಬೇಕು, ಏನು ಮಾಡಬೇಕು ಎಂಬ ವಿಚಾರಗಳನ್ನು ಹೇಳಿಕೊಟ್ಟು ನನ್ನನ್ನು ಬೆಳೆಸಿದರು. ಅನಂತಕುಮಾರರು ಪ್ರತಿಯೊಬ್ಬ ಕಾರ್ಯಕರ್ತರ ಬಗ್ಗೆಯೂ ಇಷ್ಟೇ ತಲೆ ಕೆಡಿಸಿಕೊಳ್ಳುತ್ತಿದ್ದರು.

ಅವರು ತಮ್ಮ ವಿದ್ಯಾರ್ಥಿ ಪರಿಷತ್ತಿನ ಜೀವನದಲ್ಲಿ **77** ರಿಂದ **85** ರ ತನಕ ಸುತ್ತಾಡದ, ಭೇಟಿ ನೀಡದ ತಾಲೂಕು ಇರಲಿಲ್ಲ, ಅವರು ಹೋಗದೆ ಇರುವ ಊರು ಇರಲಿಲ್ಲ. ಆ ಎಲ್ಲ ಊರುಗಳಲ್ಲಿ ವಿದ್ಯಾರ್ಥಿ ಪರಿಷತ್ತನ್ನು ಕಟ್ಟುವುದರ ಮೂಲಕ ಅಲ್ಲಿ ಕಾರ್ಯಕರ್ತರ ಪಡೆಯನ್ನು ಕಟ್ಟಿದ್ದನ್ನು ನಾವು ನೋಡಿದ್ದೇವೆ. ಅದೇ ರೀತಿ, ಬಿಜೆಪಿಗೆ ಬಂದ ಮೇಲೆ ಶ್ರೀ ಯಡಿಯೂರಪ್ಪನವರ ಜೊತೆ ಸೇರಿ ಹಗಲು ರಾತ್ರಿಯೆನ್ನದೆ ರಾಜ್ಯಾದ್ಯಂತ ಸುತ್ತಾಡಿ ಒಬ್ಬೊಬ್ಬ ಕಾರ್ಯಕರ್ತರನ್ನೂ ಎಳೆದುಕೊಂಡು ಬಂದು ಅವರನ್ನು ರಾಜಕೀಯ ನಾಯಕರನ್ನಾಗಿ ಬೆಳೆಸಿದರು. ದೇಶದ ಕೆಲಸವನ್ನು ಮಾಡುವಂತೆ ಅವರಿಗೆ ಪ್ರೇರಣೆಯನ್ನು ನೀಡಿದರು.

ಅನಂತಕುಮಾರರ ಸಾಮೀಪ್ಯದ ಲಾಭ ನನಗೆ ದೊರಕಿದೆ. ರಾಷ್ಟ್ರಮಟ್ಟದಲ್ಲಿ ಉನ್ನತ ಜವಾಬ್ದಾರಿ ದೊರೆತ ಮೇಲೂ ರಾಜ್ಯಕ್ಕೆ ಆಗಮಿಸಿದಾಗ ಪ್ರತಿ ಊರಿನ, ಪ್ರತಿ ತಾಲೂಕಿನ ಕಾರ್ಯಕರ್ತರನ್ನು ಹೆಸರು ಹಿಡಿದು ಮಾತನಾಡಿಸಬಲ್ಲವರೆಂದರೆ ಅದು ಅನಂತಕುಮಾರ್ ಒಬ್ಬರೇ. ಕಾರ್ಯಕರ್ತರಲ್ಲಿನ ಒಳ್ಳೆಯ ಗುಣಗಳನ್ನು ಗುರುತಿಸಿ ಅವರಲ್ಲಿನ ಶಕ್ತಿಯನ್ನು ಪೋಷಿಸಿದವರು ಶ್ರೀ ಯಡಿಯೂರಪ್ಪ ಮತ್ತು ಶ್ರೀ ಅನಂತಕುಮಾರ್.

ಯಡಿಯೂರಪ್ಪನವರು ರಾಜ್ಯದ ಅಧ್ಯಕ್ಷರಾಗಿದ್ದಾಗ ಅವರು ಪ್ರತಿ ತಾಲೂಕಿಗೆ ಭೇಟಿ ನೀಡುವುದಕ್ಕೆ, ಅನಂತಕುಮಾರ್ ಅವರು ಎಂಟು ವರ್ಷಗಳ ಕಾಲ ವಿದ್ಯಾರ್ಥಿ ಪರಿಷತ್ತಿನ ಕೆಲಸಕ್ಕಾಗಿ ಹಗಲಿರುಳೂ ರಾಜ್ಯ ಸುತ್ತಿದ ಅನುಭವವೇ ಸಹಾಯಕ್ಕೆ ಬಂದಿತು. ಕಾರ್ಯಕರ್ತರು ಯಾವುದೇ ಸಮಯದಲ್ಲಿ, ಯಾವುದೇ ಸನ್ನಿವೇಶದಲ್ಲಿ ಭೇಟಿಯಾದರೂ ಅವರಲ್ಲಿ ಚೈತನ್ಯ ಮತ್ತು ಭವಿಷ್ಯದ ಬಗ್ಗೆ ಭರವಸೆ ತುಂಬುವ ಕೆಲಸವನ್ನು ಅವರು ಮಾಡುತ್ತಿದ್ದುದನ್ನು ನಾನು ಸಮೀಪದಿಂದ ನೋಡಿದ್ದೇನೆ.

ಅನಂತಕುಮಾರರ ಜೀವನದ ಎಲ್ಲ ಪ್ರಮುಖ ಘಟನೆಗಳಲ್ಲಿ ನಾನು ಅವರ ಜೊತೆ ಇದ್ದೆ. ಅವರು ಇಲ್ಲಿ ತಮ್ಮ ತಾಯಿಯ ಹೆಸರಿನಲ್ಲಿ ಪ್ರತಿಷ್ಠಾನವನ್ನು ಶುರು ಮಾಡಿದಾಗಲೂ ನಾನು ಅವರನ್ನು ಹತ್ತಿರದಿಂದ ನೋಡಿದ್ದೇನೆ. ಅವರ ಯೋಚನೆಗಳು ಸದಾ ಸಮಾಜಮುಖಿಯಾಗಿದ್ದವು. ಅವರು ಸದಾ ರಾಜ್ಯದ ಹಿತವನ್ನೇ ಚಿಂತಿಸುತ್ತಿದ್ದರು. ರಾಜ್ಯದ ಒಳಿತಿಗಾಗಿ ಅವರು ಬೆಂಗಳೂರಿನ ಮೆಟ್ರೋ ಮುಂತಾದ ಅನೇಕ ಯೋಜನೆಗಳನ್ನು ತಂದರು. ಕಾವೇರಿ ನದಿ ನೀರಿನ ವಿವಾದದ ಸಂದರ್ಭದಲ್ಲಿ ರಾಜ್ಯಕ್ಕೆ ಅನ್ಯಾಯವಾಗದಿರುವಂತೆ ಎಷ್ಟೊಂದು ಶ್ರಮ ವಹಿಸಿದರು. ತಾವು ಮಾಡಿದ ಕೆಲಸಗಳ ಬಗ್ಗೆ ಯಾರೊಡನೆಯೂ ಹೇಳಿಕೊಳ್ಳದೆ ಇರುವ ಅವರ ರೀತಿ ನೀತಿಗಳು ನಮಗೆ ಪಾಠವಾಗಿದ್ದವು. ರಾಜ್ಯದ ಬಹುತೇಕ ಜನರಿಗೆ ಅವರು ಮಾಡಿದ ಸಾಧನೆಗಳ ಸಂಪೂರ್ಣ ಪರಿಚಯವಾದದ್ದು ಅವರು ನಿಧನರಾದ ಮೇಲೆಯೇ. ವಿರೋಧಿಗಳ ಮನಸ್ಸನ್ನೂ ಗೆದ್ದು ರಾಜ್ಯಹಿತಕ್ಕಾಗಿ ಕೆಲಸ ಮಾಡಿಸಿಕೊಳ್ಳುತ್ತಿದ್ದ ಅನಂತಕುಮಾರರನ್ನು ನಾವು ಅನುದಿನವೂ ನೆನಪಿಸಿಕೊಳ್ಳಬೇಕು.

# ಪರರ ಒಳಿತಿಗಾಗಿ ಮೀಸಲಿಟ್ಟ ಬದುಕು

ಶ್ರೀ ಕೃಷ್ಣ ಸಂಪಗಾಂವಕರ್
ಶಾಂತಿ ಕುಟೀರ, ಕಣ್ಣೂರು



"If I can not do great things, I can do small things in a great way"

\- Martin Luther King Jr

ಒಮ್ಮೆ ಅನಂತಕುಮಾರರು ಕಣ್ಣೂರಿನ ಶಾಂತಿಕುಟೀರ ಆಶ್ರಮಕ್ಕೆ ಬಂದಿದ್ದರು. ಮೇ ತಿಂಗಳ ಎಲೆಕ್ಷನ್ ಕಾಲ ಅದಾಗಿತ್ತು. ಮಹಾರಾಜರ ದರ್ಶನಕ್ಕೆ ಬಂದಿದ್ದರು. ಬಹಳ ಬಿಸಿಲು ಇತ್ತು, ಹೀಗಾಗಿ ಅವರಿಗೊಂದು ಛತ್ರಿ ಹಿಡಿಯೋಣ ಎಂದುಕೊಂಡು ಅವರ ಹಿಂದಿನಿಂದ ಛತ್ರಿ ಹಿಡಿದೆ. ಅವರು ಒಂದು ಕ್ಷಣ ತಿರುಗಿ ನೋಡಿ, ಬೇಡ ಎಂದು ಸನ್ನೆ ಮಾಡಿ ಹೇಳಿದರು. "ಯಾಕೆ ಸಾರ್, ಇಂಥ ಬಿಸಿಲು ಇದೆ" ಎಂದು ನಾನು ಹೇಳಿದೆ. ಅದಕ್ಕೆ ಅವರು "ಛೆ, ಛೇ, ಇಷ್ಟೆಲ್ಲ ಕಾರ್ಯಕರ್ತರು ನನ್ನ ಹಿಂದೆ ಬರುತ್ತಿದ್ದಾರೆ, ಅವರೆಲ್ಲ ಬಿಸಿಲಿನಲ್ಲಿಯೇ ಬರುತ್ತಿದ್ದಾರೆ, ಇದರಲ್ಲಿ ನಾನೇನು ಸ್ಪೆಷಲ್?" ಎಂದು ಉತ್ತರಿಸಿದರು. ಅವರು ಈ ಮನೋಭಾವವನ್ನು ಮೈಗೂಡಿಸಿಕೊಂಡಿದ್ದು ಅದ್ವಾನಿಯವರಿಂದ. ರಥಯಾತ್ರೆಯಲ್ಲಿ ನಿರತರಾಗಿದ್ದಾಗ, ಯಾರೋ ಒಬ್ಬರು ಬಂದು ಅದ್ವಾನಿಯವರಿಗೆ ನೀರು ಕೊಟ್ಟರಂತೆ. ಅವರು ಎಲ್ಲರ ಕಡೆ ನೋಡಿ, ಎಲ್ಲರಿಗೂ ನೀರು ಕೊಟ್ಟರೆ ಆಮೇಲೆ ನಾನು ನೀರು ಕುಡಿಯುತ್ತೇನೆ ಎಂದು ಹೇಳಿದರಂತೆ. ನುಡಿದಂತೆ ಯಾರು ನಡೆಯುತ್ತಾರೋ ಅವರು ಪೂಜ್ಯರು ಎಂದು ಹೇಳುತ್ತಾರೆ.

ನಮ್ಮ ಮಹಾರಾಜರು "ಯಾರು ಸಣ್ಣವರಾಗುತ್ತಾರೋ ಅವರೇ ದೊಡ್ಡವರಾಗಲು ಸಾಧ್ಯ" ಎಂದು ಹೇಳುತ್ತಿದ್ದರು. ಅನಂತಕುಮಾರ್ ಅವರು ಯಾವ ಮಠಾಧೀಶರ, ಪೂಜ್ಯರ ಮುಂದೆಯೂ ಕುರ್ಚಿಯ ಮೇಲೆ ಕುಳಿತಿರುವ ಒಂದು ಫೋಟೋ ಕೂಡ ಇಲ್ಲ. ಅಷ್ಟು ಗೌರವದಿಂದ ಅವರು ನಡೆದುಕೊಳ್ಳುತ್ತಿದ್ದವರು. ಅವರು ಕಣ್ಣೂರಿಗೆ ಬಂದಾಗ ಕುರ್ಚಿಯ ಮೇಲೆ ಕುಳಿತುಕೊಳ್ಳಿ ಎಂದು ಮಹಾರಾಜರು ಎಷ್ಟು ಒತ್ತಾಯಿಸಿದರೂ "ಇಲ್ಲ, ಇಲ್ಲ, ನಾನು ಕೆಳಗೆ ಕುಳಿತು ಕೊಳ್ಳುತ್ತೇನೆ" ಎಂದಿದ್ದರು. ಅವರಲ್ಲಿ ಅಷ್ಟು ವಿನಯವಿತ್ತು. ಒಂದು ಸಲ ಅದಮ್ಯ ಚೇತನದ ಶಾಲಾ ದತ್ತು ಯೋಜನೆಯಿಂದ ಒಂದು ವಾಹನವನ್ನು ಅವರು ಕೊಟ್ಟಿದ್ದರು. ನಾನು ಅದನ್ನು ಮಹಾರಾಜರಿಗೆ ತಿಳಿಸುವಾಗ ಅನಂತಕುಮಾರರು ನನ್ನ ಕಡೆ ಕೈಸನ್ನೆ ಮಾಡಿ " ಅದನ್ನು ಏನು ಹೇಳುವುದು? " ಎಂದು ಸಂಕೋಚ ವ್ಯಕ್ತಪಡಿಸಿದ್ದರು.

ಒಮ್ಮೆ ನಾನು ಹಿಮಾಲಯದಿಂದ ಬಂದು ದೆಹಲಿಯಲ್ಲಿ ಅವರ ಮನೆಯಲ್ಲಿ ತಂಗಿದ್ದಾಗ ಅವರೇ ನನ್ನ ಕೋಣೆಯ ತನಕ ಬಂದು "ಊಟಕ್ಕೆ ಬನ್ನಿ" ಎಂದು ಕರೆದರು. ನಾನು, "ನೀವು ಇಷ್ಟು ದೊಡ್ಡವರು, ಮನೆಯಲ್ಲಿ ನಾಲ್ಕಾರು ಮಂದಿ ಕೆಲಸಗಾರರೂ ಇದ್ದಾರೆ, ಅವರ ಕೈಯಲ್ಲಿ ಹೇಳಿ ಕಳುಹಿಸಿದ್ದರೆ ನಾನೇ ಬರುತ್ತಿದ್ದೆ" ಎಂದೆ. ಅದಕ್ಕೆ ಅವರು "ಹ ಹ, ಹಂಗಲ್ರೀ, ನಮ್ಮ ಮನೆಗೆ ಅತಿಥಿಗಳು ಬಂದಿದ್ದಾರೆ ಎಂದರೆ ಭಗವಂತ ಬಂದ ಹಾಗೆಯೇ" ಎಂದಿದ್ದರು. ಅವರ ಭಾವನೆ ಹಾಗೆಯೇ ಇತ್ತು. ಅವರು ಯಾರ ಬಗ್ಗೆಯೂ ಹಗುರವಾಗಿ ಮಾತಾಡಿದ್ದನ್ನು ನಾನು ಕೇಳಿಸಿಕೊಂಡಿಲ್ಲ. ಬೇಡದ ವ್ಯಕ್ತಿಯನ್ನು ಹೆಸರಿಸುವಾಗ, ಸನ್ಮಾನ್ಯ ಶ್ರೀಮಾನ್ ಎಂದು ಹೇಳುವವರೇ ಹೊರತು ಯಾರ ಬಗ್ಗೆಯೂ ಕೀಳಾಗಿ ಮಾತಾಡುತ್ತಿರಲಿಲ್ಲ.

" ಒಂದು ದಿನವಾದರೂ ನಾನು ಬೆಂಗಳೂರಿನ ಬಗ್ಗೆ ಯೋಚನೆ ಮಾಡದೆ ಇದ್ದುದಿಲ್ಲ" ಎಂದು ಅವರು ಒಮ್ಮೆ ಹೇಳಿದ್ದರು. ಅವರು ತಮಗಾಗಿ ಬದುಕಲಿಲ್ಲ. ಅವರ ಬದುಕು ಪರರಿಗಾಗಿ ಮೀಸಲಾಗಿತ್ತು.


"This life is short, the vanities of the world are transient, but they alone live who live for others, the rest are more dead than alive." ಎಂದು ಸ್ವಾಮಿ ವಿವೇಕಾನಂದರು ಹೇಳಿದ ಮಾತು ಅನಂತಕುಮಾರರಿಗೆ ಅಕ್ಷರಶಃ ಅನ್ವಯವಾಗುತ್ತಿತ್ತು. ಅಂತಹ ಮಹಾನ್ ಚೇತನಕ್ಕೆ ನನ್ನ ನಮನಗಳು. ಅವರ ಆದರ್ಶ ನಮಗೆ ಯಾವಾಗಲೂ ಬೆಳಕಾಗಿರಲಿ.

# ರಾಮನಗರ ಜಿಲ್ಲೆಯ ಕೆಲವು ಪುರಾತನ ದೇಗುಲಗಳು





**ದೇಗುಲದರ್ಶನ ಮಾಲಿಕೆ-೩**









ದೇಗುಲ ದರ್ಶನ ಮಾಲಿಕೆಯಲ್ಲಿ ಈ ತಿಂಗಳ ಸಂಚಿಕೆಯಲ್ಲಿ ರಾಮನಗರ ಜಿಲ್ಲೆಯ ಕೆಲವು ಪ್ರಾಚೀನ ದೇವಾಲಯಗಳನ್ನು ಪರಿಚಯ ಮಾಡಿಕೊಳ್ಳೋಣ. ಬೆಂಗಳೂರು ನಗರ ಜಿಲ್ಲೆಗೆ ಹೊಂದಿಕೊಂಡಿರುವ ರಾಮನಗರ ಜಿಲ್ಲೆಯ ಅನೇಕ ಊರು, ಗ್ರಾಮಗಳಲ್ಲಿ ಪುರಾತನ ದೇಗುಲಗಳಿವೆ. ಈ ಪ್ರಾಂತ್ಯದಲ್ಲಿ ಶ್ರೀರಾಮಚಂದ್ರನು ಸಂಚರಿಸಿದ್ದನೆಂಬ ಐತಿಹ್ಯವೂ ಇದೆ.

ರಾಮನಗರ ಜಿಲ್ಲೆಯಲ್ಲಿ ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಪಾಳೆಯಗಾರರು ಮುಂತಾದವರು ಆಡಳಿತ ನಡೆಸಿದ್ದು ಆಯಾ ಕಾಲದಲ್ಲಿ ಅನೇಕ ದೇವಾಲಯಗಳು ನಿರ್ಮಿತವಾಗಿವೆ.

ಬೆಂಗಳೂರು-ಮೈಸೂರು ರಸ್ತೆಯಲ್ಲಿ ಸಿಗುವ ಬಿಡದಿಯಲ್ಲಿ, ಅಂಗಡಿ ರಸ್ತೆಯಲ್ಲಿರುವ ದೇವಾಲಯದಲ್ಲಿ ಆರು ಅಡಿ ಎತ್ತರವಿರುವ ಬೃಹತ್ ಶಿವಲಿಂಗವು ಒಂಬತ್ತನೆಯ ಶತಮಾನದಷ್ಟು ಪುರಾತನವಾದುದು.

ರಾಮನಗರ ಸಮೀಪದಲ್ಲಿರುವ ರಾಮಗಿರಿ ಒಂದು ಪ್ರೇಕ್ಷಣೀಯ ಸ್ಥಳ. ಸುಮಾರು ನಾಲ್ಕುನೂರು ಮೆಟ್ಟಲುಗಳನ್ನು ಹೊಂದಿರುವ ಬೆಟ್ಟದ ಮೇಲೆ, ಹತ್ತನೆಯ ಶತಮಾನದ ದೇವಾಲಯವಿದೆ. ಇಲ್ಲಿ ಸೀತಾಮಾತೆಯನ್ನು ತನ್ನ ಎಡತೊಡೆಯ ಮೇಲೆ ಕುಳ್ಳಿರಿಸಿ ಕೊಂಡಿರುವ ಪಟ್ಟಾಭಿರಾಮನ ಮೂರ್ತಿಯಿದೆ. ಶಿಲ್ಪದಲ್ಲಿ ಲಕ್ಷ್ಮಣ, ಹನುಮಂತರನ್ನೂ ಚಿತ್ರಿಸಲಾಗಿದೆ.

ರಾಮನಗರದಿಂದ ಎಂಟು ಕಿ.ಮೀ ದೂರದಲ್ಲಿರುವ ಕೂನಗಲ್ಲು ಗ್ರಾಮದಲ್ಲಿ ಚತುರ್ಭುಜೆ ಮಾರಮ್ಮನ ವಿಗ್ರಹ ಒಂಬತ್ತನೆಯ ಶತಮಾನದಷ್ಟು ಪ್ರಾಚೀನವಾದ ಶಿಲ್ಪವಾಗಿದ್ದರೆ, ಶ್ರೀದೇವಿ ಭೂದೇವಿ ಸಹಿತವಿರುವ ವರದರಾಜನ ದೇಗುಲ ವಿಜಯನಗರದ ಕಾಲದ್ದು. ಇಲ್ಲಿ ರಂಗನಾಥ ಹಾಗೂ ಗ್ರಾಮದೇವತೆ ಕೂನಗಲ್ಲಮ್ಮನ ದೇವಾಲಯಗಳೂ ಇವೆ.

ಚನ್ನಪಟ್ಟಣದ ಸಮೀಪವಿರುವ ಹೊಂಗನೂರು ಹಾಗೂ ಕೂಡ್ಲೂರು ಗ್ರಾಮಗಳಲ್ಲಿ ಗಂಗರ ಹಾಗೂ ಚೋಳರ ಕಾಲದ ಅನೇಕ ದೇವಾಲಯಗಳಿವೆ.

ಚನ್ನಪಟ್ಟಣಕ್ಕೆ ಹನ್ನೆರಡು ಕಿ.ಮೀ ದೂರದಲ್ಲಿರುವ ಕುಡಿಕೆ ಬೇವೂರು ಎಂಬ ಗ್ರಾಮದಲ್ಲಿ ಗಂಗರ ಕಾಲದ ಅರ್ಕೇಶ್ವರ ಮತ್ತು ವಿಜಯನಗರ ಕಾಲದ ಚೌಡೇಶ್ವರಿ ದೇವಾಲಯಗಳಿವೆ. ಇಲ್ಲಿ ಎರಡು ಬೆಟ್ಟಗಳಿದ್ದು ಒಂದರಲ್ಲಿ ವಿಜಯನಗರ ಕಾಲದ ವೆಂಕಟೇಶ್ವರ, ಮತ್ತೊಂದರಲ್ಲಿ ಹೊಯ್ಸಳರ ಕಾಲದ ಸಿದ್ದರಾಮೇಶ್ವರ ದೇವಾಲಯಗಳು ಸುಂದರವಾದ ಪರಿಸರದಲ್ಲಿವೆ.

ಚನ್ನಪಟ್ಟಣದಲ್ಲಿರುವ ವರದರಾಜ ಮತ್ತು ಸೌಮ್ಯನಾಯಕಿ ಅಮ್ಮನವರ ದೇವಾಲಯವು ವಿಜಯನಗರ ಕಾಲದ ನಿರ್ಮಾಣ. ಈ ದೇವಾಲಯದ ಸಮೀಪದಲ್ಲಿರುವ ಎರಡು ಗುಡಿಗಳಲ್ಲಿ ವ್ಯಾಸರಾಯರು ಪ್ರತಿಷ್ಠಾಪಿಸಿದರೆನ್ನಲಾದ ಮಾರುತಿಯ ಸುಂದರವಾದ ಶಿಲ್ಪಗಳಿವೆ. ಇಲ್ಲಿ ಸಂದರ್ಶಿಸಬಹುದಾದ ಮತ್ತೆರಡು ಆಲಯಗಳೆಂದರೆ, ಕಾಶಿ ವಿಶ್ವೇಶ್ವರ ಮತ್ತು ನೀಲಕಂಠೇಶ್ವರ ಎಂಬ ಶಿವಾಲಯಗಳು .

ಚನ್ನಪಟ್ಟಣಕ್ಕೆ ಆರು ಕಿ.ಮೀ ದೂರದಲ್ಲಿರುವ ದೇವರ ಹೊಸಹಳ್ಳಿಯಲ್ಲಿ ಪ್ರಸಿದ್ಧವಾದ ಸಂಜೀವರಾಯ ಮಾರುತಿಯ ದೇವಾಲಯವಿದ್ದು ಅಪಾರ ಭಕ್ತ ವೃಂದವನ್ನು ಆಕರ್ಷಿಸುತ್ತಿದೆ.

**ಕೆಂಗೇರಿ ಚಕ್ರಪಾಣಿ/ಟಿ.ಎಸ್. ಗೋಪಾಲ್**

**ಈ ಕಾರ್ಯಕ್ರಮವನ್ನು ಯೂಟ್ಯೂಬ್ ನಲ್ಲಿ ವೀಕ್ಷಿಸಿ**
**http://YouTube.com/AnanthkumarPratishthana**





# ಬಡವರಿಗೆ ತಲೆಯ ಮೇಲೊಂದು ಸೂರು ಕೊಟ್ಟ ಅನಂತಕುಮಾರ್

**ಶ್ರೀ ಗೋವಿಂದ ಕಾರಜೋಳ,** ಸಚಿವರು, ಕರ್ನಾಟಕ ಸರ್ಕಾರ



ಶ್ರೀ ಅನಂತಕುಮಾರ್ ಕೇವಲ ಒಬ್ಬ ವ್ಯಕ್ತಿಯಾಗಿರಲಿಲ್ಲ. ಸಮಾಜದಲ್ಲಿ ಅವರು ಒಂದು ಶಕ್ತಿಯಾಗಿ ಬೆಳೆದವರು. ಯಡಿಯೂರಪ್ಪನವರ ಜೊತೆ ಕರ್ನಾಟಕದಲ್ಲಿ ಭಾರತೀಯ ಜನತಾ ಪಕ್ಷದ ಆಗುಹೋಗುಗಳ ಜವಾಬ್ದಾರಿಯನ್ನು ವಹಿಸಿಕೊಂಡು ಪಕ್ಷವನ್ನು ಸಂಘಟಿಸಿ ಅಧಿಕಾರಕ್ಕೆ ತರುವುದರಲ್ಲಿ ಅವರ ಪಾತ್ರ ಬಹಳ ದೊಡ್ಡದಾಗಿತ್ತು. ಅನಂತಕುಮಾರ್ ಅವರಿಗೆ ರಾಜಕಾರಣ ಮಾತ್ರವೇ ಜೀವನವಾಗಿರಲಿಲ್ಲ. ಸಮಾಜದಲ್ಲಿ ಬಡವರು, ಶೋಷಿತರು ಮುಂತಾದವರಿಗೆ ಜೀವನದಲ್ಲಿ ಮೇಲೆ ಬರಲು ಸಹಾಯ ಮಾಡಬಲ್ಲ ಕಾರ್ಯಕ್ರಮಗಳನ್ನು, ಯೋಜನೆಗಳನ್ನು ರೂಪಿಸಿದ ವ್ಯಕ್ತಿ ಅವರು. ಅಷ್ಟೇ ಅಲ್ಲದೆ, ಅವರು ತಮ್ಮ ತಾಯಿಯವರ ಸ್ಮರಣಾರ್ಥ ಸ್ಥಾಪಿಸಿದ ಅದಮ್ಯಚೇತನ ಸಂಸ್ಥೆಯ ಮೂಲಕ ಲಕ್ಷಾಂತರ ಬಡಮಕ್ಕಳಿಗೆ ಊಟ- ಉಪಚಾರದ ವ್ಯವಸ್ಥೆ ಮಾತ್ರವಲ್ಲದೆ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವ ಅನೇಕ ದೊಡ್ಡ ಕಾರ್ಯಕ್ರಮಗಳನ್ನು ಕೂಡ ಹಮ್ಮಿಕೊಂಡರು. ಅವರ ಜೊತೆಯಾಗಿ ಶ್ರೀಮತಿ ತೇಜಸ್ವಿನಿಯವರು ಕೂಡ ಹೆಗಲಿಗೆ ಹೆಗಲು ಕೊಟ್ಟು ಕೆಲಸ ಮಾಡಿದ್ದಾರೆ.

ಅನಂತಕುಮಾರ್ ಅವರು ದೇಶಾದ್ಯಂತ ಪ್ರವಾಸ ಮಾಡುವಾಗ ಅವರು ಎಲ್ಲ ಕಡೆ ಕೊಳೆಗೇರಿಗಳಲ್ಲಿ ವಾಸಿಸುತ್ತಿರುವ ಕಡುಬಡವರು, ಪೌರಕಾರ್ಮಿಕರು, ದುಡಿಯುವ ವರ್ಗದ ಜನರಿಗೆ ಮನೆ ಇಲ್ಲದ್ದನ್ನು ಕಣ್ಣಾರೆ ಕಂಡರು. ಕೊಳೆಗೇರಿಗಳಲ್ಲಿ ಸ್ವತ: ಅಧ್ಯಯನವನ್ನು ಮಾಡಿ ವಾಲ್ಮೀಕಿ ಅಂಬೇಡ್ಕರ್ ಆವಾಸ್(ವಸತಿ) ಯೋಜನೆಯನ್ನು ಅವರು ಇಡೀ ದೇಶದಲ್ಲಿ ಜಾರಿಗೆ ತಂದರು. ಇವತ್ತು ದೇಶದ ಉದ್ದಗಲಕ್ಕೂ ಅನೇಕ ಪಟ್ಟಣಗಳಲ್ಲಿ ಬಡವರಿಗೆ ಮನೆ ನಿರ್ಮಾಣ ಮಾಡಿಕೊಟ್ಟಿರುವುದನ್ನು ಕಾಣಬಹುದು. ಬಡವರು ಹೇಗೋ ಕೂಲಿನಾಲಿ ಮಾಡಿಕೊಂಡು ಹೊಟ್ಟೆ ತುಂಬಿಕೊಳ್ಳುತ್ತಾರೆ, ಆದರೆ ಅವರು ಮನೆ ಕಟ್ಟಿಕೊಳ್ಳುವುದು ಕೇವಲ ಕನಸಿನ ಮಾತು. ಅದನ್ನು ಅರಿತು ಅವರು ಪ್ರಾರಂಭಿಸಿದ ಸಾಮಾಜಿಕ ಕೆಲಸವನ್ನು ಇವತ್ತು ನಾವು ಸ್ಮರಿಸಿಕೊಳ್ಳುತ್ತಿದ್ದೇವೆ.

ದೇಶದಲ್ಲಿ ರೈತರಿಗೆ ಗೊಬ್ಬರದ ಸಮಸ್ಯೆ, ಅದರಲ್ಲೂ ಯೂರಿಯಾ ರಸಗೊಬ್ಬರದ ಸಮಸ್ಯೆ ಎದುರಾದಾಗ ಕಾಳಸಂತೆಕೋರರು ಗೊಬ್ಬರದ ಅಕ್ರಮ ದಾಸ್ತಾನು ಮಾಡುವುದರಿಂದ ರೈತರು ಗೊಬ್ಬರಕ್ಕಾಗಿ ಬೀದಿಗಿಳಿದು ಹೋರಾಟ ಮಾಡುತ್ತಿದ್ದರು. ಹೀಗಾಗಿ, ತಮ್ಮ ಕೈಯಲ್ಲಿ ಅಧಿಕಾರ ಬಂದಾಗ, ಈ ಸಮಸ್ಯೆಯನ್ನು ಪರಿಹರಿಸಲು ಬೇವು ಲೇಪಿತ ಯೂರಿಯಾವನ್ನು ಬಳಕೆಗೆ ತರುವ ಶ್ರೇಷ್ಠವಾದ ಕೆಲಸ ಮಾಡಿದರು. ಅನಂತಕುಮಾರರ ಈ ಉಪಕಾರವನ್ನು ರೈತಾಪಿ ಜನರು ಇವತ್ತು ನೆನಪಿಸಿಕೊಳ್ಳುತ್ತಿದ್ದಾರೆ. ಅನಂತಕುಮಾರ್ ಅವರು ತಮ್ಮ ಬದುಕಿನಲ್ಲಿ, ಅಧಿಕಾರದ ಅವಧಿಯಲ್ಲಿ ಮಾಡಿದ ಇಂತಹ ಅನೇಕ ಕೆಲಸಕಾರ್ಯಗಳು ಸದಾ ನೆನಪಿನಲ್ಲಿ ಉಳಿಯುತ್ತವೆ.

ಮನುಷ್ಯನ ಹುಟ್ಟು ಆಕಸ್ಮಿಕವಾಗಿದ್ದರೂ ಪ್ರತಿಯೊಬ್ಬನ ಸಾವು ನಿಶ್ಚಿತವಾಗಿರುತ್ತದೆ. ಆದರೆ ಜೀವಿತಾವಧಿಯಲ್ಲಿ ವ್ಯಕ್ತಿಯು ಮಾಡಿರುವ ಕೆಲಸ ಕಾರ್ಯಗಳು ಅವರ ಹೆಜ್ಜೆಗುರುತುಗಳಾಗಿ ಸಮಾಜದಲ್ಲಿ ಉಳಿದು ವ್ಯಕ್ತಿಯ ಹೆಸರು ಶಾಶ್ವತವಾಗುತ್ತದೆ ಎಂಬುದಕ್ಕೆ ಅನಂತಕುಮಾರರು ಒಂದು ಉತ್ತಮ ಉದಾಹರಣೆ.

# ಮಾತಿನ ಗಾರುಡಿಗ

**ಶ್ರೀ ಮುರುಗೇಶ್ ನಿರಾಣಿ**
ಸಚಿವರು, ಕರ್ನಾಟಕ ಸರ್ಕಾರ



ಅನಂತಕುಮಾರರು ನಡೆದು ಬಂದ ದಾರಿಯನ್ನು ಕೇವಲ ಎರಡು ಮೂರು ನಿಮಿಷಗಳಲ್ಲಿ ವಿವರಿಸಲು ಸಾಧ್ಯವಿಲ್ಲ. ಅವರು 24X7 ಕೆಲಸ ಮಾಡಿ ಎಲ್ಲ ಯುವ ರಾಜಕಾರಣಿಗಳಿಗೆ ಒಂದು ಪ್ರೇರಣೆಯಾಗಿದ್ದವರು. ಅವರು ನಮ್ಮ ದೇಶವನ್ನು, ರಾಜ್ಯವನ್ನು ಕಟ್ಟುವ ಕೆಲಸ ಮಾಡಿದ ಮಹಾನ್ ವ್ಯಕ್ತಿ. ನನಗೆ ತೇಜಸ್ವಿನಿಯವರದು 3 5 ವರ್ಷಗಳ ಪರಿಚಯ. ಭೂಮರೆಡ್ಡಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂಜಿನಿಯರಿಂಗ್ಓದುತ್ತಿದ್ದಾಗ ಅವರು ನನ್ನ ಬ್ಯಾಚ್ಮೇಟ್ ಆಗಿದ್ದರು. ಅವತ್ತು ಅವರು ಮಾಡುತ್ತಿದ್ದ ಭಾಷಣವನ್ನು ನೆನಪಿಸಿಕೊಂಡರೆ ಅನಂತಕುಮಾರ್ ಅವರಿಗೆ ಭಾಷಣವನ್ನು ಬರೆದುಕೊಡುತ್ತಿದ್ದವರು ತೇಜಸ್ವಿನಿಯವರೇ ಇರಬೇಕು ಎಂದು ನಮಗನ್ನಿಸುತ್ತಿತ್ತು. ಅಂದರೆ ಅನಂತಕುಮಾರರಿಗೆ ಸರಿಸಮಾನವಾದ ಪ್ರತಿಭೆಯನ್ನು ತೇಜಸ್ವಿನಿಯವರು ಹೊಂದಿದ್ದರು. ನಂತರ ಸುಮಾರು ೩೦ ವರ್ಷಗಳಿಂದ ಅವರ ಜೊತೆಗೆ ಕೆಲಸ ಮಾಡುವಂತಹ ಅಪರೂಪದ ಸನ್ನಿವೇಶಗಳು ಸಾಕಷ್ಟು ಬಂದವು.

ಇವತ್ತು ನಾವು ಕೈಗಾರಿಕೆಯಲ್ಲಿ ಅಥವಾ ರಾಜಕಾರಣದಲ್ಲಿ ಈ ಸ್ಥಾನವನ್ನು ಮುಟ್ಟಿದ್ದರೆ ಅದರಲ್ಲಿ ಶ್ರೀ ಯಡಿಯೂರಪ್ಪನವರ ಮತ್ತು ವಿಶೇಷವಾಗಿ ಶ್ರೀ ಅನಂತಕುಮಾರ್ ಅವರ ಪಾತ್ರ ಬಹಳ ದೊಡ್ಡದು ಎಂದು ನಾವೆಂದೂ ಮರೆಯುವಂತಿಲ್ಲ. ನಮಗೆ ನಮ್ಮದೇ ಆದ ಒಂದು ಕನಸಿತ್ತು. ಶ್ರೀ ಯಡಿಯೂರಪ್ಪನವರು ಒಂದು ಸಲ ಮುಖ್ಯಮಂತ್ರಿ ಆದ ಮೇಲೆ 2 ನೇ ಬಾರಿಗೆ ಅನಂತಕುಮಾರ್ ಅವರೇ ಈ ರಾಜ್ಯದ ಮುಖ್ಯಮಂತ್ರಿ ಆಗಬೇಕು, ಅವರದ್ದೇ ಆಗಿರುವ ಕನಸುಗಳ, ಕಲ್ಪನೆಗಳ ಪ್ರಯೋಜನವು ನಮ್ಮ ರಾಜ್ಯದ ಆರೂವರೆ ಕೋಟಿ ಜನರಿಗೆ ಲಭಿಸಬೇಕು ಎಂಬುದು ನಮ್ಮ ಆಸೆಯಾಗಿತ್ತು. ಆದರೆ ದೇವರು ಅದನ್ನು ಈಡೇರಿಸಲಿಲ್ಲ. ಆದರೆ ನನ್ನದೊಂದು ಅಪೇಕ್ಷೆಯಿದೆ, ಅವರ ಸ್ಥಾನವನ್ನು ತುಂಬಿರುವ ತೇಜಸ್ವಿನಿಯವರಲ್ಲಿ ಸಾಕಷ್ಟು ರಾಜಕೀಯ ಮುತ್ಸದ್ದಿತನವಿದೆ, ದೂರದೃಷ್ಟಿಯಿದೆ, ಅನಂತಕುಮಾರರ ಎಲ್ಲ ಗುಣಗಳು ತೇಜಸ್ವಿನಿಯವರಲ್ಲಿವೆ, ಅವರ ಗರಡಿಯಲ್ಲೇ ಪಳಗಿ ಅವರ ಅನುಭವಗಳನ್ನು ಹಂಚಿಕೊಂಡು ಬೆಳೆದಿರುವವರು ಅವರು, ಅನಂತಕುಮಾರ್ ಅವರ ಶಕ್ತಿ ಮತ್ತು ತೇಜಸ್ವಿನಿಯವರ ಶಕ್ತಿ ಒಟ್ಟಿಗೆ ಸೇರಿ ಬರುವ ದಿವಸಗಳಲ್ಲಿ ಅವರ ಕನಸುಗಳನ್ನು ನನಸು ಮಾಡುವ ಕಾಲ ಬೇಗ ಬರಲಿ. ಅವರು ಕೂಡ ಈ ರಾಜ್ಯವನ್ನು ಕಟ್ಟುವ ಕೆಲಸದ ಮುಂಚೂಣಿಯಲ್ಲಿ ಇರಬೇಕು. ನಮಗಂತೂ ಬಹಳ ಕನಸುಗಳಿವೆ. ತೇಜಸ್ವಿನಿಯವರಲ್ಲಿ ಸಾಮರ್ಥ್ಯವೂ ಇದೆ. ಅವರು ಎಷ್ಟು ಸರಳ ವ್ಯಕ್ತಿ ಎಂಬುದು ಅವರ ಮನೆಗೆ ಹೋದರೆ ಅಥವಾ ಅವರ ನಿತ್ಯಜೀವನವನ್ನು ಗಮನಿಸಿದರೆ ತಿಳಿಯುತ್ತದೆ. ಅವರಿಗೆ ಇದನ್ನೆಲ್ಲ ಕಲಿಸಿಕೊಟ್ಟವರು ಮಾನ್ಯ ಅನಂತಕುಮಾರ್ ಅವರು. ಅನಂತಕುಮಾರ್ ಅವರ ಸರಳ ಜೀವನ ನಮ್ಮಂಥ ಯುವಕರಿಗೆ ಆದರ್ಶವಾಗಿದೆ.

ಒಂದು ಸಲ ಚುನಾವಣೆಯ ಪ್ರಚಾರಕ್ಕೆ ಬಂದಾಗ ಅವರು " ಮುರುಗೇಶ್ ನಿರಾಣಿಯವರು ಸಕ್ಕರೆಯಷ್ಟೇ ಸಿಹಿಯಾದ ಮತ್ತು ಸಿಮೆಂಟಿನಷ್ಟೇ ದೃಢವಾದ ಬಂಧುತ್ವ ಹೊಂದಿದ್ದಾರೆ" ಎಂದು ಹೇಳಿದ್ದರು. ನನ್ನ ಬಳಿ ಸಕ್ಕರೆ ಕಾರ್ಖಾನೆ ಮತ್ತು ಸಿಮೆಂಟಿನ ಕಾರ್ಖಾನೆ ಎರಡೂ ಇದ್ದುದನ್ನು ಗಮನಿಸಿ ವೇದಿಕೆ ಮೇಲೆ ನಿಂತಾಗಲೇ ಶಬ್ದಗಳನ್ನು ಜೋಡಿಸಿ ಮಾತನಾಡುವ ಕಲೆ ಅವರಿಗೆ ಸಿದ್ಧಿಸಿತ್ತು. ನಾವು ರಾಜಕೀಯ ಮತ್ತು ಕೈಗಾರಿಕೆ ಎರಡೂ ಕ್ಷೇತ್ರಗಳಲ್ಲಿ ಇರುವುದರಿಂದ ಅಂಬಾನಿಯಂತಹ ಕೈಗಾರಿಕೋದ್ಯಮಿ, ಅದ್ವಾನಿಯಂತಹ ರಾಜಕಾರಣಿ ಎರಡೂ ಸೇರಿದರೆ ನಿರಾಣಿ ಎಂದು ಹೇಳಿದ್ದರು. ಹೀಗೆ ವೇದಿಕೆಯ ಮೇಲೆ ಭಾಷಣ ಮಾಡುತ್ತಿರುವಾಗಲೇ ನೇರವಾಗಿ ಶಬ್ದಗಳನ್ನು ಜೋಡಿಸುವ ಚಳಕ ಅವರಲ್ಲಿತ್ತು.

ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುವುದೇನೆಂದರೆ, ಅನಂತಕುಮಾರ್ ಅವರ ಕನಸನ್ನು ನನಸು ಮಾಡಲು ಶ್ರೀಮತಿ ತೇಜಸ್ವಿನಿಯವರು ನಾಯಕತ್ವ ವಹಿಸಬೇಕು. "ನಿಮ್ಮ ಮತ್ತು ಅನಂತಕುಮಾರ್ ಅವರ ಕನಸುಗಳನ್ನು ಈಡೇರಿಸುವ ಶಕ್ತಿಯನ್ನು ಭಗವಂತ ನಿಮಗೆ ಕೊಡಬೇಕು" ಎಂದು ದೇವರಲ್ಲಿ ಪ್ರಾರ್ಥನೆ ಮಾಡುತ್ತೇನೆ.

# ವಿಶಿಷ್ಟ ಹಸಿರು ಯೋಜನೆ

ಪುಟ 2 ರಿಂದ

14.5 ಲಕ್ಷ ಮರಗಳಿದ್ದವು. ಈ 7:1 ರ ಅನುಪಾತವನ್ನು 1:1 ಕ್ಕೆ ಇಳಿಸುವುದು ಸಸ್ಯಾಗ್ರಹದ ತತ್ ಕ್ಷಣದ ಗುರಿ. ಇತರ ನಗರಗಳ ಸ್ಥಿತಿ ಬೆಂಗಳೂರಿಗಿಂತ ಭಯಾನಕವಾಗಿದೆ. ಮುಂಬೈ ನಗರದಲ್ಲಿ 14 ಜನರಿಗೆ ಒಂದು ಮರವಿದೆ. ದೆಹಲಿಯೂ ಇದಕ್ಕೆ ಹೊರತಲ್ಲ. ಈ ರೀತಿಯಾಗಿರುವ ಭವಿಷ್ಯದ ಭೀಕರತೆಯನ್ನು ಎದುರಿಸಲು ಈಗಲೇ ಸಮರೋಪಾದಿಯಲ್ಲಿ ಕಾರ್ಯೋನ್ಮುಖರಾಗಬೇಕಾಗಿದೆ. ಈ ನಿಟ್ಟಿನಲ್ಲಿ ಸಸ್ಯಾಗ್ರಹ ಒಂದು ಪುಟ್ಟ ಪ್ರಯತ್ನ. ಬೆಂಗಳೂರಿನ ಇತಿಹಾಸಕ್ಕೆ ಇದು ಅದಮ್ಯ ಚೇತನ ಸಂಸ್ಥೆಯ ಅಳಿಲು ಸೇವೆ.

ಬೆಂಗಳೂರಿನ ಹಸಿರು ಭಾನುವಾರದಿಂದ ಪ್ರೇರಿತರಾಗಿ ಇತರ ನಗರಗಳಲ್ಲಿಯೂ ಅದೇ ರೀತಿಯ ಕಾರ್ಯಕ್ರಮಗಳು ಪ್ರಾರಂಭವಾಗಿವೆ. ಬಳ್ಳಾರಿಯಲ್ಲಿ ಶ್ರೀಮತಿ ಹರಿಣಿಯವರು ಸತತವಾಗಿ 102 ಹಸಿರು ಭಾನುವಾರ ನಡೆಸಿ ಮುನ್ನುಗ್ಗುತ್ತಿದ್ದರೆ ರಾಯಚೂರಿನಲ್ಲಿ ಶ್ರೀ ರಾಜೇಂದ್ರಕುಮಾರ್ 2 6 5 ಹಸಿರು ಭಾನುವಾರಗಳನ್ನು ಮುಗಿಸಿದ್ದಾರೆ. ಹುಬ್ಬಳ್ಳಿಯಲ್ಲಿ ಹಸಿರು ಹುಬ್ಬಳ್ಳಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯುತ್ತಿದೆ. ಅದಮ್ಯ ಚೇತನದ ಅನೇಕ ಕಾರ್ಯಕರ್ತರು ಮೊದಲನೆಯ ದಿನದಿಂದ ಇಂದಿನ ವರೆಗೂ ಎಲ್ಲ ಭಾನುವಾರಗಳಲ್ಲಿ ಹಾಜರಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀಕಾಂತ್, ಪ್ರಕಾಶ್, ಮಲ್ಲಾರಿ ಗೌಡರು ಈ ಎಲ್ಲ ಭಾನುವಾರಗಳಲ್ಲಿ ಕ್ಷೇತ್ರದಲ್ಲಿ ನಿಂತು ನಿಸ್ವಾರ್ಥ ಸೇವೆ ಸಲ್ಲಿಸಿದ್ದಾರೆ.

ನಮ್ಮ ಇತಿಹಾಸವನ್ನು ಗಮನಿಸಿದರೆ ಪ್ರತಿಯೊಂದು ಸಾಮ್ರಾಜ್ಯಕ್ಕೆ ಒಂದು ಮರವಿದ್ದುದು ತಿಳಿಯುತ್ತದೆ. ಅದೇ ರೀತಿ, ಪ್ರತಿ ಕುಟುಂಬಕ್ಕೆ, ಪ್ರತಿ ನಕ್ಷತ್ರಕ್ಕೆ ಒಂದು ಮರವಿರುವುದು ತಿಳಿಯುತ್ತದೆ. ಒಂದು ಮರವನ್ನು ಅನಿವಾರ್ಯವಾಗಿ ಕಡಿಯಲೇ ಬೇಕಾಗಿ ಬಂದಾಗ ಅದಕ್ಕೆ ಪೂಜೆ ಮಾಡಿ, ನಮಸ್ಕರಿಸಿ, ಅದರ ಅನುಮತಿಯನ್ನು ಪಡೆದು ನಂತರ ಕಡಿಯುವ ಸನಾತನ ಸಂಸ್ಕೃತಿ ನಮ್ಮದು. ನಾವು ನೆಡುವ ಒಂದೊಂದು ಗಿಡವೂ ಭೂತಾಯಿಗೆ ವಂದನೆ ಸಲ್ಲಿಸುವ ಕಾರ್ಯಕ್ರಮ ಎಂದು ನಾವು ಭಾವಿಸುತ್ತೇವೆ. ನಮ್ಮ ಸಸ್ಯಾಗ್ರಹದ ಹಿಂದೆ ಇಂತಹ ಪವಿತ್ರ ಭಾವನೆಯಿದೆ.

**ಕೆ.ಜನಾರ್ದನ ತುಂಗ**

ಸಸ್ಯಲೋಕ ಪರಿಚಯ ಮಾಲಿಕೆ

# ಅಂಟುವಾಳ



ಅದಮ್ಯ ಚೇತನ ಸಂಸ್ಥೆಯಿಂದ ಹಸಿರು ಭಾನುವಾರಗಳಲ್ಲಿ ಅಂಟುವಾಳದ ಸಸಿಯನ್ನು ಹೆಚ್ಚಾಗಿ ನೆಡುತ್ತೇವೆ. ಆಂಗ್ಲಭಾಷೆಯಲ್ಲಿ ಇದನ್ನು ಸೋಪ್ನಟ್ ಟ್ರೀ ಎಂದು ಕರೆಯುತ್ತಾರೆ. ಇದು ಸ್ಯಾಪಿಂಡೇಸೀ ಕುಟುಂಬಕ್ಕೆ ಸೇರಿದ (Sapindus emarginatus drupes) ಆರ್ಥಿಕ ಪ್ರಾಮುಖ್ಯತೆಯಿರುವ ಸಸ್ಯ.

ಅಂಟುವಾಳದ ಮರ ಭಾರತ, ಶ್ರೀಲಂಕಾಗಳ ಉಷ್ಣವಲಯದ ಕಾಡುಗಳಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತದೆ. ಅಲ್ಲದೇ ಗ್ರಾಮಾಂತರ ಪ್ರದೇಶಗಳಲ್ಲಿ, ಮಲೆನಾಡ ತೋಟಗಳಲ್ಲಿ, ಬೇಲಿಗಳಲ್ಲಿ ಬೆಳೆಸಲಾಗುತ್ತದೆ.

**ಗಿಡದ ಲಕ್ಷಣಗಳು**

ಇದು ಮಧ್ಯಮಗಾತ್ರದ ಎಲೆ ಉದುರುವ ಮರ . ಒಣ ಹವೆಯ ಪ್ರದೇಶಗಳಲ್ಲಿ ಚಿಕ್ಕದಾಗಿ, ತೇವ ಹವೆಯ ಜಾಗಗಳಲ್ಲಿ ಸುಮಾರು ಎತ್ತರವಾಗಿ ಬೆಳೆಯುತ್ತದೆ. ಸೂಕ್ತವಾದ ಪರಿಸರ ದೊರೆತರೆ ಇದು 15 ಮೀ. ಎತ್ತರ ಮತ್ತು 1.5 ಮೀ. ಸುತ್ತಳತೆಯನ್ನು ಹೊಂದುತ್ತದೆ.

ಇದರ ತೊಗಟೆ ಬೂದು-ಕಂದು ಮತ್ತು ಒರಟು. ಎಲೆಗಳು ಸಂಯುಕ್ತ, 12-30 ಸೆಂ.ಮೀ. ಉದ್ದ, 2-3 ಜೋಡಿ ಅಭಿಮುಖ ಪತ್ರಕಗಳಿರುತ್ತವೆ. ಮಾರ್ಚ್ ತಿಂಗಳಲ್ಲಿ ಎಲೆಗಳು ಉದುರಿಹೋಗಿ, ಸುಮಾರು 8 ದಿನಗಳಲ್ಲಿ ಮರವು ಮತ್ತೆ ಚಿಗುರಿ ಹಸಿರು ಎಲೆಗಳನ್ನು ಹೊಂದುತ್ತದೆ. ಹೂಗಳು ದ್ವಿಲಿಂಗಿ ಮತ್ತು ಕೆನೆಬಿಳಿ ಬಣ್ಣದ್ದು. ಕಾಯಿಗಳ ಬಣ್ಣ ಮಾಸಲು. ಅವುಗಳ ವ್ಯಾಸ ಸುಮಾರು 1.3-3 ಸೆಂ.ಮೀ. ಒಂದು ಕಾಯಿಯಲ್ಲಿ 2-3 ಬೀಜಗಳಿರುತ್ತವೆ. ಬೀಜಗಳು ದುಂಡು, ಕಪ್ಪು ಮತ್ತು ಗಟ್ಟಿ. ಹೂಗಳು ಅಕ್ಟೋಬರ್ ನಿಂದ ಡಿಸೆಂಬರ್ ವರೆಗೂ, ಕಾಯಿಗಳು ಫೆಬ್ರವರಿಯಿಂದ ಏಪ್ರಿಲ್‌ವರೆಗೂ ಕಾಣಿಸಿಕೊಳ್ಳುತ್ತವೆ. ಕಾಯಿಗಳು ಪಕ್ವವಾದ ಮೇಲೆ ನೆಲದ ಮೇಲೆ ಉದುರಿಬೀಳುತ್ತವೆ. ಇದರ ಬೀಜ ಸಂಗ್ರಹಿಸಿ ಮಣ್ಣಲ್ಲಿ ನೆಟ್ಟು ಸಸಿ ಮಾಡಬಹುದು.

**ಉಪಯೋಗಗಳು**

ತೋಟದ ತೇವ ಆರದಂತೆ ನೆರಳಿನ ರಕ್ಷಣೆ ನೀಡುವ ಬೇಲಿಯಂಚಿನ ಅಂಟುವಾಳದ ಮರಗಳು ವನ್ಯಜೀವಿಗಳು ತೋಟಕ್ಕೆ ಹೆಚ್ಚು ಹಾನಿ ಮಾಡದಂತೆ ತಡೆಯುತ್ತವೆ. ಆಗಾಗ ಮರಗಳ ಟೊಂಗೆ ಕತ್ತರಿಸುತ್ತ ತೋಟಕ್ಕೆ ನೆರಳಿನ ತೊಂದರೆಯಾಗದಂತೆ ನಿರ್ವಹಿಸಿದರೆ ಅಂತರ್ಜಲವು ಹೆಚ್ಚಾಗಿ ನೀರಿನ ಅರ್ಧ ಸಮಸ್ಯೆಯನ್ನು ಪರಿಹರಿಸುತ್ತವೆ. ಬಿರುಗಾಳಿಯ ರಭಸ ನಿಯಂತ್ರಿಸಿ ತೋಟ ಉಳಿಸುತ್ತವೆ. ತೋಟಕ್ಕೆ ಸೊಪ್ಪು, ಮನೆ ಬಳಕೆಯ ಉರುವಲಿಗೂ ನೆರವಾಗುತ್ತವೆ.

ಇದರ ಕಾಯಿಯ ತಿರುಳನ್ನು ಜಜ್ಜಿ ನೀರಿನಲ್ಲಿ ನೆನೆ ಹಾಕಿ ಬಂದ ನೀರು ಮತ್ತು ನೊರೆಯಲ್ಲಿ ಉಣ್ಣೆ ಮತ್ತು ರೇಷ್ಮೆ ಬಟ್ಟೆಗಳನ್ನು ಮತ್ತು ಬೆಳ್ಳಿ ಮತ್ತು ಬಂಗಾರದ ಒಡವೆಗಳನ್ನು ತೊಳೆಯಲು ಉಪಯೋಗಿಸುತ್ತಾರೆ. ಕೂದಲನ್ನು ತೊಳೆಯಲು ಅಂದರೆ ಅಭ್ಯಂಜನ ಸ್ನಾನ ಮಾಡಲು ಇದು ಉಪಯೋಗದಲ್ಲಿದೆ. ಇದರ ಕಾಯಿಯನ್ನು ನೀರಿನಲ್ಲಿ ಹಾಕಿ ತಿಕ್ಕಿದಾಗ ನೊರೆ ಬರುವುದರಿಂದ ಇದಕ್ಕೆ ನೊರೆ ಕಾಯಿ ಎಂದೂ ಹೆಸರು. ಅಸ್ತಮಾ ಮತ್ತು ಶ್ವಾಸಕೋಶದ ರೋಗದಿಂದ ನರಳುವವರು ಸ್ನಾನಕ್ಕೆ ಸೀಗೆಕಾಯಿಯ ಬದಲು ಇದನ್ನು ಉಪಯೋಗಿಸುತ್ತಾರೆ. ಯಾಕೆಂದರೆ ಇದರ ಕಾಯಿಗೆ ಯಾವ ತರದ ಘಾಟು ಇರುವುದಿಲ್ಲ. ಇದರ ಎಲೆಗಳನ್ನು ದನಗಳ ಮೇವಾಗಿ ಬಳಸುತ್ತಾರೆ ಹಾಗೂ ಕಾಯಿಗಳಿಂದ ಔಷಧಿಯನ್ನು ತಯಾರಿಸುತ್ತಾರೆ. ಕಾಂಡದಿಂದ ಆಟದ ಸಾಮಾನು ಮತ್ತು ಬಾಚಣಿಗೆಯನ್ನು ತಯಾರಿಸುತ್ತಾರೆ.

ಇದರ ಬೀಜದ ತಿರುಳನ್ನು ಶುಂಠಿ, ಬೆಲ್ಲ, ಏಲಕ್ಕಿ ಬೀಜದೊಂದಿಗೆ ಸೇರಿಸಿ ಅಸ್ತಮಾ ರೋಗದ ಚಿಕಿತ್ಸೆಯಲ್ಲಿ ಬಳಸಲಾಗುತ್ತದೆ. ಕಾಯಿಯ ಲೇಪದಿಂದ ಗಂಡಮಾಲೆ ವಾಸಿಯಾಗುತ್ತದೆ. ಇದರ ಕಾಯಿಯನ್ನು ತೇಯ್ದು ವಿನಿಗರ್ ನೊಂದಿಗೆ ಸೇರಿಸಿ ತಲೆಗೆ ಹಚ್ಚಿ ಸ್ನಾನ ಮಾಡಿದರೆ ಹೇನು ನಾಶವಾಗುತ್ತವೆ. ನೀರು ಅಂಟುವಾಳ ರಸ ಸೇರಿಸಿ ಮಿಶ್ರಣ ಮಾಡಿ ಈ ನೀರನ್ನು ಗಾಜಿನ ಮೇಲೆ ಸಿಂಪಡಿಸಿ ಒಣಗಿರುವ ಸ್ವಚ್ಛವಾದ ಬಟ್ಟೆಯಿಂದ ಒರೆಸಿದರೆ ಗಾಜುಗಳು ಸ್ಪಟಿಕದಂತೆ ಹೊಳೆಯುತ್ತವೆ. ಅಂಟುವಾಳ ಕಾಯಿಯನ್ನು ನೀರಿನಲ್ಲಿ ನೆನೆಸಿ ಆ ನೀರಿನಲ್ಲಿ ವಿಗ್ರಹಗಳನ್ನು ಮುಳುಗಿಸಿ ಸುಮಾರು ಅರ್ಧ ಗಂಟೆ ಅಥವಾ ಒಂದು ಗಂಟೆಯ ಬಳಿಕ ವಿಗ್ರಹವನ್ನು ಹೊರತೆಗೆದು ಇದೇ ನೀರಿನಲ್ಲಿ ಅದ್ದಿದ ಹತ್ತಿಯ ಒರಟು ಬಟ್ಟೆಯಿಂದ ಒರೆಸಿ. ಕಿಲುಬು ಸುಲಭವಾಗಿ ನಿವಾರಣೆಯಾಗಿ ವಿಗ್ರಹಗಳು ತಮ್ಮ ಮೂಲಬಣ್ಣದಲ್ಲಿ ಹೊಳೆಯುತ್ತವೆ. ಅಂಟುವಾಳ ರಸ ಬೆರೆತ ನೀರನ್ನು ರತ್ನಗಂಬಳಿಯ ಎಲ್ಲೆಡೆ ನವಿರಾಗಿ ಸಿಂಪಡಿಸಿ ಕೊಂಚ ಹೊತ್ತಿನ ಬಳಿಕ ಬ್ರಷ್ ಮೂಲಕ ಅಥವಾ ವ್ಯಾಕ್ಯೂಮ್ ಕ್ಲೀನರ್ ಮೂಲಕ ಸ್ವಚ್ಛಗೊಳಿಸಿ.

ಈ ರೀತಿಯಾಗಿ, ಅಂಟುವಾಳಕಾಯಿಯು ಹಲವು ಬಗೆಯಲ್ಲಿ ಉಪಯುಕ್ತವಾಗಿದೆ. ಇದಕ್ಕೆ ಮುಖ್ಯಕಾರಣ ಇದರ ನೊರೆ. ಅಂಟುವಾಳದ ಕಾಯಿಯಲ್ಲಿನ ಸಪೋನಿನ್ ಎಂಬ ರಾಸಾಯನಿಕ ಇದರ ನೊರೆಗೆ ಕಾರಣವಾಗಿದೆ. ಇದೊಂದು ನೈಸರ್ಗಿಕ ಮಾರ್ಜಕವಾಗಿದ್ದು ಯಾವುದೇ ಅಡ್ಡ ಪರಿಣಾಮಗಳಿಲ್ಲದಿರುವುದು, ಯಾವುದೇ ಹಾನಿಕಾರಕ ರಾಸಾಯನಿಕವಿಲ್ಲದಿರುವುದು, ಚರ್ಮಕ್ಕೆ ಸುರಕ್ಷಿತವಾಗಿರುವುದು ಮೊದಲಾದವು ಇದರ ಜನಪ್ರಿಯತೆಗೆ ಕಾರಣವಾಗಿದೆ. ಒಣಫಲಗಳ ರೂಪದಲ್ಲಿ ಅಂಟುವಾಳ ಕಾಯಿ ಗ್ರಂಧಿಗೆ ಅಂಗಡಿಗಳಲ್ಲಿ ದೊರಕುತ್ತದೆ.



ಛಾಯಾ ಓಕ್ ಬಾಪಟ್

## ಹಸಿರು ಸಂಕೀರ್ಣಕ್ಕೊಂದು ಒಡಂಬಡಿಕೆ



ಕಳೆದ ಸೆಪ್ಟೆಂಬರ್ 2021ರಂದು ಗೋರಖ್ ಪುರದ ದೀನ ದಯಾಳ್ ಉಪಾಧ್ಯಾಯ ವಿಶ್ವವಿದ್ಯಾನಿಲಯದ ಕುಲಪತಿ ಶ್ರೀ ರಾಜೇಂದ್ರ ಸಿಂಗ್ ರವರು ಅದಮ್ಯ ಚೇತನಕ್ಕೆ ಭೇಟಿ ನೀಡಿದ್ದರು. ಅದಮ್ಯಚೇತನದ ತ್ಯಾಜ್ಯರಹಿತ ಅಡುಗೆಮನೆ, ಹಸಿರು ಆಂದೋಲನದ ಉಪಕ್ರಮ, ಪರಿಸರಸ್ವಚ್ಛತಾಕ್ರಮಗಳು ಮೊದಲಾದುವನ್ನು ಪರಿಶೀಲಿಸಿ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದರು. ತಮ್ಮ ವಿಶ್ವವಿದ್ಯಾನಿಲಯದ ಸಂಕೀರ್ಣದಲ್ಲೂ ಈ ಎಲ್ಲ ವ್ಯವಸ್ಥೆಗಳನ್ನು ಜಾರಿಗೊಳಿಸಲು ಅದಮ್ಯಚೇತನ ಸಂಸ್ಥೆಯ ಸಹಯೋಗವನ್ನು ಕೋರಿದರು.ಈ ಸಂದರ್ಭದಲ್ಲಿ ಗೋರಖಪುರ ವಿಶ್ವವಿದ್ಯಾನಿಲಯ ಮತ್ತು ಅದಮ್ಯಚೇತನದ ನಡುವೆ ಒಡಂಬಡಿಕೆಯೊಂದಕ್ಕೆ ಸಹಿಹಾಕಲಾಯಿತು. ವಿಶ್ವವಿದ್ಯಾಲಯದ ಪರವಾಗಿ ಕುಲಪತಿ ಶ್ರೀ ರಾಜೇಂದ್ರ ಸಿಂಗ್ ಮತ್ತು ಅದಮ್ಯಚೇತನದ ಪರವಾಗಿ ಶ್ರೀ ಪ್ರದೀಪ್ ಓಕ್ ಈ ಒಡಂಬಡಿಕೆಗೆ ಸಹಿ ಹಾಕಿದರು. ಅದರಂತೆ, ಗೋರಖಪುರ ವಿಶ್ವವಿದ್ಯಾನಿಲಯದ ಹಸಿರು ಆಂದೋಲನಕ್ಕೆ ಅದಮ್ಯಚೇತನ ತನ್ನ ಪರಿಣತ ಮಾರ್ಗದರ್ಶನವನ್ನು ನೀಡಲಿದೆ. ಕ್ಯಾಂಪಸ್ಸಿನಲ್ಲಿ ಸಸ್ಯಗಳನ್ನು ನೆಡುವುದು, ಸಮರ್ಪಕ ತ್ಯಾಜ್ಯ ನಿರ್ವಹಣೆಯ ಮೂಲಕ ವಿಶ್ವವಿದ್ಯಾಲಯದ ಸಂಕೀರ್ಣವನ್ನು ಶೂನ್ಯತ್ಯಾಜ್ಯ ಆವರಣವಾಗಿ ಪರಿವರ್ತಿಸುವುದು, ಹಸಿರು ಇಂಧನದ ಲಭ್ಯತೆ-ಬಳಕೆಗಳಿಗೆ ಅವಕಾಶ ಕಲ್ಪಿಸುವುದು, ಏಕೋಪಯೋಗಿ ಪ್ಲಾಸ್ಟಿಕ್ ಬಳಕೆಯನ್ನು ತಗ್ಗಿಸಿ ಇಲ್ಲವಾಗಿಸುವುದು, ಹಸಿರು ಜೀವನಶೈಲಿಯನ್ನು ಪಠ್ಯವಿಷಯದಲ್ಲಿ ಅಳವಡಿಸಿ, ಅಲ್ಪಾವಧಿ-ದೀರ್ಘಾವಧಿ ಶೈಕ್ಷಣಿಕ ಕೋರ್ಸುಗಳ ಬೋಧನೆಯ ಮೂಲಕ ನವಜನಾಂಗವನ್ನು ಹಸಿರು ಜೀವನದೆಡೆಗೆ ಒಲಿಸುವುದು- ಇವೇ ಮೊದಲಾದ ಕಾರ್ಯಕ್ರಮಗಳನ್ನು ವಿಶ್ವವಿದ್ಯಾಲಯದಲ್ಲಿ ಅದಮ್ಯಚೇತನದ ಸಹಯೋಗದೊಡನೆ ಕೈಗೊಳ್ಳಲು ಒಡಂಬಡಿಕೆಯಲ್ಲಿ ಪ್ರಸ್ತಾಪಿಸಲಾಗಿದೆ. ಈ ಸಂದರ್ಭದಲ್ಲಿ ನೃಪತುಂಗ ವಿ.ವಿ ಕುಲಪತಿ ಡಾ. ಶ್ರೀನಿವಾಸ ಬಳ್ಳಿ, ಡಾ. ಜಿ. ಪಿ. ನಂದಿನಿ ಮೊದಲಾದವರು ಹಾಜರಿದ್ದರು.

ವ್ಯಕ್ತಿ ವಿಶೇಷ ಮಾಲಿಕೆ

# ಕರ್ನಾಟಕ ಕೇಸರಿ ಜಗನ್ನಾಥ ರಾವ್ ಜೋಶಿ



" ಮರಣದ ನಂತರ ಒಂದೊಮ್ಮೆ ನಮ್ಮ ಅಸ್ಥಿಗಳನ್ನು ಗಂಗಾನದಿಯಲ್ಲಿ ವಿಸರ್ಜಿಸಿ, ನಂತರ ಯಾರಾದರೂ ಕಿವಿಗೊಟ್ಟು ಆಲಿಸಿದರೆ ಅಲ್ಲಿಂದ " ವಂದೇ ಮಾತರಂ" ಎಂಬ ಒಂದೇ ಒಂದು ಧ್ವನಿ ಮೊಳಗುವುದು" ಹೀಗೆಂದು ನಂದಿಬೆಟ್ಟದ ತಪ್ಪಲಿನಲ್ಲಿ 17/07/1983 ರಂದು ಉದ್ಘೋಷಿಸಿದವರು ಜಗನ್ನಾಥ ರಾವ್ ಜೋಶಿಯವರು. ಇದಾಗಿ ಎಂಟು ವರ್ಷಗಳ ನಂತರ 17/07/1991 ರಂದು ಪುಣೆ ನಗರದ ಹೊರವಲಯದಲ್ಲಿ ಹರಿಯುವ ಇಂದ್ರಾಯಣಿ ನದಿಯ ನೀರಿನಲ್ಲಿ ಜೋಶಿಯವರ ಅಸ್ಥಿಗಳನ್ನು ವಿಸರ್ಜಿಸಲಾಯಿತು. ಅಂದು ಇಂದ್ರಾಯಣಿ ನದಿಯಿಂದ ಹೊಮ್ಮಿದ ವಂದೇ ಮಾತರಂ ನಿನಾದ ಇಂದು ದೇಶದೆಲ್ಲೆಡೆ ವ್ಯಾಪಿಸಿದ್ದು ಸಾಂಸ್ಕೃತಿಕ ರಾಷ್ಟ್ರೀಯತೆಯ ಮಹಾರವವಾಗಿ ಅನುರಣಿಸುತ್ತಿದೆ.

**ಆರಂಭಿಕ ದಿನಗಳು**

ಇಂತಹ ಪ್ರಖರ ರಾಷ್ಟ್ರೀಯವಾದಿ ಜನಿಸಿದ್ದು 23/06/1920 ರಂದು. ಗದಗ ಜಿಲ್ಲೆಯ ನರಗುಂದದಲ್ಲಿ, ಅವರ ತಂದೆ ನರಗುಂದದ ಹನುಮಾನ್ ದೇವರ ಪೂಜಾರಿಯಾಗಿದ್ದ ಅನಂತ ಧೋಂಡು ದೀಕ್ಷಿತ ಜೋಶಿ, ತಾಯಿ ಕಮಲಾಬಾಯಿ. ಪ್ರಾಥಮಿಕ ವಿದ್ಯಾಭ್ಯಾಸವನ್ನು ನರಗುಂದದಲ್ಲಿ ಮುಗಿಸಿದ ಜೋಶಿಯವರು ಉನ್ನತ ವ್ಯಾಸಂಗಕ್ಕಾಗಿ ಪುಣೆ ನಗರವನ್ನು ಸೇರಿದರು. ಬಿಎ (ಇಂಗ್ಲಿಷ್ ಆನರ್ಸ್) ಪದವಿ ಪಡೆದು 1942 ರಲ್ಲಿ ಮಿಲಿಟರಿ ಅಕೌಂಟ್ಸ್ ವಿಭಾಗದಲ್ಲಿ ಗುಮಾಸ್ತರಾಗಿ ಉದ್ಯೋಗ ಪ್ರಾರಂಭಿಸಿದರು. ನಂತರ 1943 ರಲ್ಲಿ ಬೆಳಗಾವಿಗೆ ವರ್ಗವಾಗಿ ಬಂದರು. ದೇಶಸೇವೆಯ ತುಡಿತ ಬಲವತ್ತರವಾಗಿ 1945 ರಲ್ಲಿ ಕೆಲಸಕ್ಕೆ ರಾಜೀನಾಮೆ ನೀಡಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಪೂರ್ಣಾವಧಿ ಪ್ರಚಾರಕರಾದರು.

ಜೋಶಿಯವರು ಪುಣೆಯಲ್ಲಿರುವಾಗ ಡಾ. ಹೆಡ್ಗೇವಾರ್ ಮತ್ತು ಗೋಳ್ವಲ್ಕರರಿಂದ ಪ್ರಭಾವಿತರಾಗಿ ಆರೆಸ್ಸೆಸ್ ಸೇರಿದ್ದರು. ಮುಂದೆ ಗೋಳ್ವಲ್ಕರರು ಕರ್ನಾಟಕದಲ್ಲಿ ಶಾಖೆಯನ್ನು ಪ್ರಾರಂಭಿಸಲು ಶ್ರೀ ಯಾದವರಾವ್ ಜೋಶಿಯವರಿಗೆ ಆದೇಶಿಸಿದಾಗ ಬೆಂಗಳೂರಿನ ಶ್ರೀರಾಮಪುರದಲ್ಲಿ ಮೊತ್ತಮೊದಲ ಶಾಖೆಯನ್ನು 1942-43 ರಲ್ಲಿ ಪ್ರಾರಂಭಿಸಿದರು. ಆಗ ಯಾದವರಾವ್ ಜೋಶಿಯವರ ಜೊತೆಯಿದ್ದ ಐವರಲ್ಲಿ ಜಗನ್ನಾಥ ರಾವ್ ಜೋಶಿಯವರು ಪ್ರಮುಖರು. ಕರ್ನಾಟಕದಲ್ಲಿ ಆರೆಸ್ಸೆಸ್ ಬಲವಾಗಿ ಬೇರೂರಲು ಶ್ರಮಿಸಿದ ಜೋಶಿಯವರು ನಂತರ ಭಾರತೀಯ ಜನಸಂಘದ ನಾಯಕತ್ವ ವಹಿಸಿ ದೇಶದ ಉದ್ದಗಲ ಸಂಚರಿಸಿದರು.

**ಗೋವಾ ವಿಮೋಚನಾ ಹೋರಾಟ**

ಜೋಶಿಯವರಿಗೆ ಹರಿದು ಹಂಚಿ ಹೋಗಿದ್ದ ದೇಶದ ಏಕೀಕರಣದ ಚಿಂತೆ ಕಾಡತೊಡಗಿತ್ತು. ಸರದಾರ್ ಪಟೇಲರು ಬದುಕಿರುವಾಗಲೇ ಎಲ್ಲ ಸಂಸ್ಥಾನಗಳನ್ನು ಭಾರತದಲ್ಲಿ ವಿಲೀನಗೊಳಿಸಿಕೊಂಡಿದ್ದರೂ ಗೋವಾ ಪ್ರಾಂತ್ಯವೊಂದು ವಿದೇಶೀಯರಾದ ಪೋರ್ಚುಗೀಸರ ಆಳ್ವಿಕೆಯಲ್ಲಿ ಉಳಿದುಬಿಟ್ಟಿತ್ತು. ಜೋಶಿಯವರು ಜನಸಂಘ, ಆರೆಸ್ಸೆಸ್ ಕಾರ್ಯಕರ್ತರ ಬೃಹತ್ ಪಡೆಯೊಂದರ ನೇತೃತ್ವ ವಹಿಸಿ "ಗೋವಾ ಚಲೋ" ಎಂದು ಹೊರಟುಬಿಟ್ಟಿದ್ದರು. ಸಾವಂತವಾಡಿ ಅರಣ್ಯದ ಮೂಲಕ ಗೋವಾ ಪ್ರವೇಶಿಸಿದ ಜೋಶಿಯವರನ್ನು ಗೋವಾ ಸೈನ್ಯವು ದಸ್ತಗಿರಿ ಮಾಡಿ ಅಗುವಾಡಾ ಕೋಟೆಯ ಜೈಲಿನಲ್ಲಿ ಬಂಧನದಲ್ಲಿರಿಸಿತು.

ವಿಚಾರಣೆಯ ಸಂದರ್ಭದಲ್ಲಿ "ನೀವು ಪರ್ಮಿಟ್ ಇಲ್ಲದೆ ಗೋವಾ ಪ್ರವೇಶಿಸಿದ್ದು ಏಕೆ?" ಎಂದು ನ್ಯಾಯಾಧೀಶರು ಕೇಳಿದ ಪ್ರಶ್ನೆಗೆ "ನಾನು ಇಲ್ಲಿಗೆ ಬಂದಿರುವುದು (ವಿದೇಶೀಯರಾದ) ನೀವು ಇಲ್ಲಿಗೇಕೆ ಬಂದಿರಿ ಎಂದು ಕೇಳಲು. ಗೋವಾ ನನ್ನ ಭಾರತದ ಒಂದು ಭಾಗ. ಇಲ್ಲಿ ಎಲ್ಲಿ ಬೇಕಾದರೂ ಸಂಚರಿಸುವುದು ನನ್ನ ಹಕ್ಕು" ಎಂದು ಸಿಂಹದಂತೆ ಘರ್ಜಿಸಿದ್ದರು. ಮುಂದೆ ಅಗುವಾಡಾ ಕೋಟೆ ಜೈಲಿನಲ್ಲಿ ಜೂನ್ 1955 ರಿಂದ ಫೆಬ್ರವರಿ 1957 ರ ವರೆಗೆ ಅವರನ್ನು ಒಂಟಿಯಾಗಿ ಬಂಧನದಲ್ಲಿರಿಸಲಾಯಿತು. ಈ ಘಟನೆಯ ನಂತರ ಜೋಶಿಯವರಿಗೆ "ಕರ್ನಾಟಕ ಕೇಸರಿ" ಎಂಬ ಬಿರುದು ಅಂಟಿಕೊಂಡಿತು.

**ಬಹುಮುಖಿ ವ್ಯಕ್ತಿತ್ವ**

ಜೋಶಿಯವರು ಶ್ಯಾಮಾಪ್ರಸಾದ್ ಮುಖರ್ಜಿ, ದೀನದಯಾಳ ಉಪಾಧ್ಯಾಯ, ವಾಜಪೇಯಿ, ಅದ್ವಾನಿ, ಮಲ್ಕಾನಿ, ಸಿಕಂದರ್ ಭಕ್ತ್ ಮುಂತಾದ ಭಾರತೀಯ ಜನಸಂಘದ ಮುಂಚೂಣಿಯ ನಾಯಕರ ಜೊತೆ ಪಕ್ಷವನ್ನು ಸಂಘಟಿಸಲು ದೇಶವನ್ನು ಹಲವಾರು ಬಾರಿ ಸುತ್ತಿದರು. ಕನ್ನಡ, ಮರಾಠಿ, ಹಿಂದಿ, ಇಂಗ್ಲಿಷ್, ಭೋಜ್ಪುರಿ ಮತ್ತು ಮಾರ್ವಾರಿ ಭಾಷೆಗಳ ಮೇಲೆ ಪ್ರಭುತ್ವ ಹೊಂದಿದ್ದ ಜೋಶಿಯವರ ನಿರರ್ಗಳವಾದ ಮನಮೋಹಕ ಭಾಷಣವನ್ನು ಕೇಳಲು ಜನರು ಮುಗಿಬೀಳುತ್ತಿದ್ದರು.

ತಮ್ಮ ರಾಜಕೀಯ ಜೀವನದುದ್ದಕ್ಕೂ ಅವರು ಅನೇಕ ಹೋರಾಟಗಳನ್ನು ನಡೆಸಿದರು. 1948 ರಲ್ಲಿ ಗಾಂಧಿ ಹತ್ಯೆಯಾದಾಗ ಆರೆಸ್ಸೆಸ್ ಸಂಸ್ಥೆಯನ್ನು ನೆಹರೂ ಸರಕಾರ ನಿಷೇಧಿಸಿತು. ಈ ನಿಷೇಧವನ್ನು ಪ್ರತಿಭಟಿಸಿ ಚಳವಳಿ ನಡೆಸಿದ ಜೋಶಿಯವರನ್ನು ನೆಹರೂ ಸರಕಾರವು ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿ ನಾಲ್ಕೂವರೆ ವರ್ಷಗಳ ಕಾಲ ಸೆರೆಯಲ್ಲಿರಿಸಿತು. ಮುಂದೆ ಇಂದಿರಾಗಾಂಧಿಯವರು ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿ ಪ್ರಜಾಪ್ರಭುತ್ವವನ್ನು ಹತ್ತಿಕ್ಕಿದಾಗ ಜೋಶಿಯವರು ಮತ್ತೆ 11/11/1975 ರಿಂದ 19/01/1977 ರವರೆಗೆ ಸೆರೆವಾಸ ಅನುಭವಿಸಬೇಕಾಯಿತು.

ಚುನಾವಣಾ ರಾಜಕೀಯದಲ್ಲಿ ತಮ್ಮ ಜನ್ಮಭೂಮಿ ಧಾರವಾಡ ಮತ್ತು ಕರ್ಮಭೂಮಿ ಪುಣೆ ನಗರಗಳು ಕೈಹಿಡಿಯದಿದ್ದರೂ ಮಧ್ಯಪ್ರದೇಶದ ಭೋಪಾಲ ಮತ್ತು ಶಾಜಾಪುರಗಳ ಪ್ರತಿನಿಧಿಯಾಗಿ ಸಂಸತ್ತಿಗೆ ಮೂರು ಬಾರಿ ಆಯ್ಕೆಯಾದರು. 1978 ರಿಂದ 1984 ರ ವರೆಗೆ ರಾಜ್ಯಸಭಾ ಸದಸ್ಯರಾಗಿಯೂ ಅವರು ಆಯ್ಕೆಯಾಗಿದ್ದರು. ಹೀಗೆ ಅವರು ಸೀಮೆಗಳನ್ನು ದಾಟಿ ಜಗನ್ನಾಥನಾಗಿ ಬೆಳೆದರು.

ಜನಪ್ರತಿನಿಧಿಯಾಗಿ ಅವರು ಗಮನ ಹರಿಸದ ಕ್ಷೇತ್ರಗಳಿಲ್ಲ. ಆಹಾರ ಭದ್ರತೆ, ನದಿಜೋಡಣೆ, ಪ್ರವಾಹ ನಿಯಂತ್ರಣ, ಶಿಕ್ಷಣ, ಮೂಲಭೂತ ಸೌಕರ್ಯಗಳು, ನಗರಗಳಿಗೆ ವಲಸೆ, ಮಹಿಳೆಯರ, ದೀನದಲಿತರ, ಆದಿವಾಸಿಗಳ ಕ್ಷೇಮಾಭಿವೃದ್ಧಿ, ಕಾರ್ಮಿಕರ ಹಿತ, ಹೀಗೆ ಜನಸಾಮಾನ್ಯರ ಹತ್ತು ಹಲವು ಸಮಸ್ಯೆಗಳನ್ನು ಸಂಸತ್ತಿನ ಎದುರು ಪರಿಣಾಮಕಾರಿಯಾಗಿ ಬಿಂಬಿಸಿದರು.

ಜಗನ್ನಾಥರಾವ್ ಜೋಶಿಯವರು ಮದುವೆಯಾಗಲಿಲ್ಲ. ನಿಲ್ಲಲು ತಮ್ಮದೊಂದು ನೆಲೆ ಮಾಡಿಕೊಳ್ಳಲಿಲ್ಲ. ತಮ್ಮ ಬದುಕಿನ ಕ್ಷಣ ಕ್ಷಣವನ್ನೂ ರಾಷ್ಟ್ರ ಹಿತಕ್ಕಾಗಿ ಸಮರ್ಪಿಸಿದರು. 1991 ರ ಜೂನ್ ತಿಂಗಳಿನಲ್ಲಿ ಮಧುಮೇಹ ಉಲ್ಬಣಗೊಂಡು ಅವರ ಕಾಲನ್ನು ಕತ್ತರಿಸಲಾಗಿತ್ತು. ಅವರಿಗೆ ಪಾರ್ಶ್ವವಾಯು ಕೂಡ ಉಂಟಾಗಿತ್ತು. ಆಸ್ಪತ್ರೆಯಲ್ಲಿದ್ದ ಅವರನ್ನು ನೋಡಲು 29/06/1991 ರಂದು ಅದ್ವಾನಿಯವರು ಬಂದಾಗಲೂ ಅವರಿಗೆ ದೇಶದ ಚಿಂತೆ. ರಥಯಾತ್ರೆಯ ಹಿನ್ನೆಲೆಯಲ್ಲಿ ಅವರು ಅದ್ವಾನಿಯವರಿಗೆ " ಭಾರತದ ಭವಿಷ್ಯವನ್ನು ನಿರೂಪಿಸಲು ಬಯಸುವವರಿಗೆ ಭದ್ರವಾದ ಬುನಾದಿಯನ್ನು ನೀವು ಹಾಕಿಕೊಟ್ಟಿರಿ" ಎಂದು ಅಭಿನಂದಿಸಿದ್ದರು.

ತಮ್ಮ ಗಂಭೀರ ನಡವಳಿಕೆ, ಅನುಪಮ ಸಾಧನೆ, ನಿಸ್ವಾರ್ಥಸೇವೆ, ಹಾಸ್ಯಪ್ರವೃತ್ತಿ, ಅಪಾರವಾದ ತ್ಯಾಗಗಳಿಂದ ಜನಮಾನಸದಲ್ಲಿ ನೆಲೆನಿಂತಿರುವ ಜೋಶಿಯವರು 15/07/1991 ರಂದು ಇಹಲೋಕ ಯಾತ್ರೆಯನ್ನು ಮುಗಿಸಿದರು. ಅವರ ನಿಧನದ ವಾರ್ತೆಯನ್ನು ವರದಿ ಮಾಡಿದ ಮರಾಠಿ ಪತ್ರಿಕೆಯೊಂದು ಕೊಟ್ಟ ಶೀರ್ಷಿಕೆ ಹೀಗಿತ್ತು: "ಜಗನ್ನಾಥ ರಥ ನಿಂತುಬಿಟ್ಟಿತು" !

**ಕೆ. ಜನಾರ್ದನ ತುಂಗ**

ಅನಂತಪಥ

Editor: **Gopal T.S** | Asst. Editor: **K . Janardhana Thunga** | Layout: **Abhishek Gubbi Creatives**

Inputs: **Pradeep Oak / Poornaprajna**

Photographs: **Kengeri Chakrapani / Adamya Chethana / Ananthkumar Prathishthana**

Acknowledgements: **Chaya Bapat / S Kumaraswami / Adamya Chethana / Ananthkumar Prathishthana**

Printed at: **Rashtrothana Mudranalaya, Chamrajpet, Bengaluru** | Published by: **Dr. Tejaswini Ananthkumar**


For – AnanthKumar Pratishthana # 12, Sumeru,M N Krishna Rao Road, Basavanagudi, Bangalore – 04

Ph: 080 26568484 | Email: ananth.path@akp.org.in

**ಸ್ಪಷ್ಟನೆ:** ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು;
ಈ ಪತ್ರ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.

**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು. ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ.

To get a e-version of this periodical SMS your name and place to 8884182415



# ಅದಮ್ಯ ಚೇತನ
## ADAMYA CHETANA



ಶ್ರೀಮತಿ ಗಿರಿಜಾ ಶಾಸ್ತ್ರಿ ಸ್ಮಾರಕ ಸಂಸ್ಥೆ (ರಿ) Smt. Girija Shastry Memorial Trust (R)
ಸಂಸ್ಥಾಪಕರು : ಶ್ರೀ ಅನಂತಕುಮಾರ್ Founder : Sri AnanthKumar

### ತಿಂಗಳ ವರದಿ (ಸೆಪ್ಟೆಂಬರ್22 ರಿಂದ ಅಕ್ಟೋಬರ್22 - 2021 ರವರೆಗೆ)

**ಪ್ರತಿಭಾ ಪುರಸ್ಕಾರ:** ಅದಮ್ಯ ಚೇತನದಿಂದ ಬಿಸಿಯೂಟ ಪಡೆಯುವ ಪ್ರೌಢಶಾಲೆಗಳ ವಿದ್ಯಾರ್ಥಿಗಳ ಪೈಕಿ ಎಸ್.ಎಸ್.ಎಲ್.ಸಿ ಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಗುತ್ತಿದೆ. ಈ ವರ್ಷವೂ ಸಹ ಈ ಕಾರ್ಯಕ್ರಮವನ್ನು ಶ್ರೀ ಅನಂತಕುಮಾರರ ಜನ್ಮದಿನವಾದ ೨೨ ಸೆಪ್ಟೆಂಬರ್ ೨೦೨೧ರಂದು ಮುಖ್ಯಮಂತ್ರಿಯವರಾದ ಶ್ರೀ ಬಸವರಾಜ ಬೊಮ್ಮಾಯಿಯವರ ಸಮ್ಮುಖದಲ್ಲಿ ಪ್ರಕಟಿಸಲಾಯಿತು. ದಿನಾಂಕ 27.09.2021 ರಿಂದ 02.1-.2021 ರತನಕ ಒಂದು ವಾರದ ಅವಧಿಯಲ್ಲಿ ಈ ಕಾರ್ಯಕ್ರಮ ನಡೆಸಿ, ಎಲ್ಲಾ 85 ವಿದ್ಯಾರ್ಥಿಗಳಿಗೂ ಪ್ರತಿಭಾ ಪುರಸ್ಕಾರ ನೀಡಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಯಿತು. ಸರ್ವಶ್ರೀ ಚಕ್ರಪಾಣಿ, ಟಿ.ಎಸ್.ಗೋಪಾಲ್ , ಸುಜಾತಾ ಜಿ.ಟಿ , ಶ್ರೀಕೃಷ್ಣ ಸಂಪಗಾಂವ್ಕರ್ ಜೀ, ಶಾರದಾ ಪ್ರಕಾಶ್, ಗಣಪತಿ ಭಟ್, ಡಾ. ರಾಘವೇಂದ್ರ ಪ್ರಸಾದ್, ಎಸ್. ಕುಮಾರಸ್ವಾಮಿ, ಕೇಶವ ಪ್ರಸಾದ್, ಜನಾರ್ದನ ತುಂಗಾ, ಎನ್.ಪ್ರಕಾಶ್ , ಮುರಳಿ ಗೋಟೂರ್, ಡಾ ಎಮ್.ಬಿ. ವಿಭಾ, ಉಷಾ , ಶಾಲಿನಿ , ಸುರೇಶ್ , ಮೀನಾ ಶಾಸ್ತ್ರೀ ಮತ್ತು ವನಿತಾ ಹೆಗ್ಡೆ ಯವರು ಆಯಾ ದಿನಗಳಂದು ಅತಿಥಿಗಳಾಗಿ ಆಗಮಿಸಿ ಮಕ್ಕಳಿಗೆ ಪುರಸ್ಕಾರ ನೀಡಿ ಪ್ರೋತ್ಸಾಹಿಸಿದರು.

**ಇಂಟರ್ನ್ ಶಿಪ್ ಯೋಜನೆ:** ಹಲವು ಕಾಲೇಜುಗಳ ಕೋರಿಕೆಗನುಗುಣವಾಗಿ ಅದಮ್ಯ ಚೇತನದಲ್ಲಿ ಇಂಟರ್ನ್ಶಿಪ್ (ವಿದ್ಯಾರ್ಥಿಗಳ ಕಲಿಕೆಯ ಕಾರ್ಯಾಗಾರ) ಕಾರ್ಯಕ್ರಮಗಳು ಆಗಿಂದಾಗ್ಗೆ ನಡೆಯುತ್ತ ಬಂದಿವೆ. ಸಂಸ್ಥೆಯ ಅಧ್ಯಕ್ಷರಾದ ಡಾ ತೇಜಸ್ವಿನಿ ಅನಂತಕುಮಾರ್ ರವರ ಮಾರ್ಗದರ್ಶನದಂತೆ ಆ ಇಂಟರ್ನ್ಶಿಪ್ ವಿದ್ಯಾರ್ಥಿಗಳಿಗೆ ಏನೇನು ಚಟುವಟಿಕೆಗಳನ್ನು ಕೊಡಬಹುದು ಎಂದು ಮೊದಲೇ ರೂಪಿಸಿಕೊಂಡು, ಯೋಜಿಸಲಾಗುತ್ತಿದೆ. ವಿದ್ಯಾರ್ಥಿಗಳು ತೊಡಗಿಕೊಂಡ ಚಟುವಟಿಕೆಗಳೆಂದರೆ: ದಿನಸಿ ಪ್ಯಾಕಿಂಗ್ ಮಾಡುವುದು, ಅನಂತವನದಲ್ಲಿ ಕಳೆ ತೆಗೆದು ಪಾತಿ ಮಾಡಿ ಸ್ವಚ್ಛ ಮಾಡುವುದು, ಪ್ಲೇಟ್ ಬ್ಯಾಂಕ್, ನಿತ್ಯ ಅನ್ನದಾನ ಕೇಂದ್ರಗಳಲ್ಲಿ ಊಟ ಬಡಿಸುವುದು, ತರಕಾರಿ ಹೆಚ್ಚುವುದು ಮತ್ತು 'ಕಸದಿಂದ ರಸ' ಅಂದರೆ ಕಸದಿಂದ ಕರಕುಶಲ ವಸ್ತುಗಳನ್ನು ತಯಾರಿಸುವುದು, ಅದಮ್ಯಚೇತನದ ಊಟದ ಶಾಲೆಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸುವುದು. ವಿಶೇಷವಾಗಿ ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ ಆ ಚುನಾಯಿತ ಸದಸ್ಯರಿಂದ ಮಾಹಿತಿ ಸಂಗ್ರಹಿಸುವುದು.

ಈ ಸಲ ಹದಿನೈದು ದಿನಗಳ ಇಂಟರ್ನ್ಶಿಪ್ ನಲ್ಲಿ ವಾಸವಿ ಕಾಲೇಜ್ ಮತ್ತು ಬಿ.ಎಮ್.ಎಸ್ ಕಾಲೇಜಿನ 42 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

**ಶ್ರೀಚೇತನ:** ಈ ಸಾಪ್ತಾಹಿಕ ಸಭೆಯನ್ನುಪ್ರತಿ ಮಂಗಳವಾರ ಮಧ್ಯಾಹ್ನ 12 ಗಂಟೆಯಿಂದ 1-30ರ ವರೆಗೆ ಗೂಗಲ್ ಮೀಟ್ ಜಾಲತಾಣದಲ್ಲಿ ನಡೆಸಲಾಗುತ್ತಿದೆ. ದಿನಾಂಕ 28.09.2021 ರಂದು ನಡೆದ ಈ ಸಭೆಯಲ್ಲಿ ಹಸಿರು ಹಾಡು, ದೇಶಭಕ್ತಿಗೀತೆ, ಮಂಕು ತಿಮ್ಮನ ಕಗ್ಗ, ವಾರದ ಸುದ್ದಿ, ಆರೋಗ್ಯ ಅಡುಗೆ ಹಾಗೆಯೇ ಅನಂತಪಥಪತ್ರಿಕೆಯ ವಾಚನ ಕಾರ್ಯಕ್ರಮಗಳ ಪ್ರಸಾರವಾಯಿತು. ಶ್ರೀಮತಿ ಛಾಯಾ ಬಾಪಟ್ ಅವರು ಔಷಧೀಯ ಸಸ್ಯಗಳ ಬಗ್ಗೆ ಪರಿಚಯ ಮಾಡಿಕೊಟ್ಟರು.

**ಹಸಿರು ಭಾನುವಾರ:** ಸಸ್ಯಾಗ್ರಹದ ಅಂಗವಾಗಿ ಅದಮ್ಯ ಚೇತನವು ಹಮ್ಮಿಕೊಳ್ಳುತ್ತಿರುವ ಹಸಿರು ಭಾನುವಾರದ ಗಿಡ ನೆಡುವ ಕಾರ್ಯಕ್ರಮಗಳಲ್ಲಿ ಪ್ರತಿ ವಾರವೂ ಹೆಚ್ಚಿನ ಸಂಖ್ಯೆಯಲ್ಲಿ ಯುವಕಯುವತಿಯರು ಭಾಗವಹಿಸುತ್ತಿದ್ದಾರೆ. ೩೦೦ ನೇ ಕಾರ್ಯಕ್ರಮವು ಕೋರಮಂಗಲದ ಎನ್ ಡಿ ಆರ್ ಐ ಆವರಣದಲ್ಲೂ, ೩೦೧ನೇ ಕಾರ್ಯಕ್ರಮವು ಭವಾನಿ ಮಾನೆ ಕೆರೆಯ ಆವರಣದಲ್ಲೂ ನಡೆದವು. ೩೦೨ನೇ ಕಾರ್ಯಕ್ರಮವು ಅಂಜನಾಪುರ ಕೆರೆಯಂಗಳದಲ್ಲೂ ೩೦೪ನೇ ಭಾನುವಾರವು ಬನ್ನೇರುಘಟ್ಟದ ಪ್ರದೇಶದಲ್ಲೂ ಜರುಗಿದವು.

**ಇತರ ಚಟುವಟಿಕೆಗಳು:** ಅದಮ್ಯ ಚೇತನದಲ್ಲಿ ನಿತ್ಯ ಅನ್ನದಾನ ಕಾರ್ಯಕ್ರಮಕ್ಕಾಗಿ ಆಲ್ಕಾನ್ ಲ್ಯಾಬೊರೇಟರೀಸ್ ಸಂಸ್ಥೆಯವರು ಎರಡು ಲಕ್ಷರೂ ಬೆಲೆಯ ದಿನಸಿ ಪದಾರ್ಥಗಳನ್ನು ಉದಾರವಾಗಿ ನೀಡಿರುತ್ತಾರೆ. ಅಲ್ಲದೆ, ಸಂಸ್ಥೆಯವರು ಅದಮ್ಯ ಚೇತನದ ಟ್ರಸ್ಟಿ ಶ್ರೀ ಪ್ರದೀಪ್ ಓಕ್ ರವರೊಡನೆ ಅದಮ್ಯ ಚೇತನದ ಬಿಸಿಯೂಟ ಶಾಲೆಯಾದ ಬಸವನ ಗುಡಿ ಪ್ರೌಢಶಾಲೆಗೆ ಭೇಟಿ ನೀಡಿ ಮಕ್ಕಳಿಗೆ ಮಾಸ್ಕ್ ಮತ್ತು ಸೋಪ್ ವಿತರಿಸಿದರು.

ಕೊರೋನಾ ಹಾವಳಿ ತಗ್ಗುತ್ತಿರುವಂತೆ, ಅದಮ್ಯಚೇತನದಿಂದ ಪ್ಲೇಟ್ ಬ್ಯಾಂಕ್ ಸೌಲಭ್ಯವನ್ನು ಪಡೆದುಕೊಳ್ಳಲು ಅನೇಕರು ಮುಂದಾಗುತ್ತಿದ್ದಾರೆ.

ಅದಮ್ಯ ಚೇತನದಲ್ಲಿ ದಿನಾಂಕ 25-09-2021 ರಂದು ಶ್ರೀಯುತ ದೀನದಯಾಳ್ ಉಪಾಧ್ಯಾಯ ರವರ ಜಯಂತಿಯನ್ನು ಆಚರಿಸಲಾಯಿತು.

ಅದಮ್ಯ ಚೇತನದ ಅಡುಗೆಮನೆಯಿಂದ ಸದ್ಯಕ್ಕೆ ಬಿಸಿಯೂಟಕ್ಕೆ ಬದಲಾಗಿ ಒಂದೊಂದು ಮಗುವಿಗೆ ಇಂತಿಷ್ಟು ಅಕ್ಕಿ, ಬೇಳೆ, ಎಣ್ಣೆ, ಹಾಲಿನಪುಡಿ ಎಲ್ಲವನ್ನೂ ನಿಗದಿಪಡಿಸಿರುವಂತೆ, ಪ್ರತಿದಿನ 260 ಶಾಲೆಗಳಿಗೆ ಕಳುಹಿಸಲಾಗುತ್ತಿದೆ.

ಅದಮ್ಯ ಚೇತನದ ನಿತ್ಯ ಅನ್ನದಾನ ಕಾರ್ಯಕ್ರಮವು ಮುಂದುವರಿದಿದ್ದು ಪ್ರತಿನಿತ್ಯ ಗವಿಪುರ, ಜಯನಗರ, ಜೆ.ಪಿ.ನಗರ, ನಗರ್ತ ಪೇಟೆ ಕೇಂದ್ರಗಳ ಮೂಲಕ ಉಚಿತವಾಗಿ ಆಹಾರವನ್ನು ವಿತರಿಸಲಾಗುತ್ತಿದೆ.

**ವರದಿ: ಶ್ರೀಲಕ್ಷ್ಮಿ ವಿಶ್ವನಾಥ್**

ಸಸ್ಯಾಗ್ರಹ ಮತ್ತು ಹಸಿರು ಭಾನುವಾರಗಳು ಶ್ರೀ ಅನಂತಕುಮಾರ್ ಅವರ ಹೃದಯಕ್ಕೆ ತೀರ ಹತ್ತಿರವಾದ ಯೋಜನೆಗಳಾಗಿದ್ದವು. ಬೆಂಗಳೂರಿನಲ್ಲಿದ್ದಾಗ ಅವರು ಒಂದು ಕಾರ್ಯಕ್ರಮವನ್ನೂ ತಪ್ಪಿಸಿಕೊಳ್ಳುತ್ತಿರಲಿಲ್ಲ. 03/01/2016 ರಂದು ಪ್ರಾರಂಭವಾದ ಈ ಆಂದೋಲನ 03/10/2021 ರಂದು 301ರ ಮೈಲಿಗಲ್ಲನ್ನು ಸ್ಥಾಪಿಸಿತು. ಈ ಇತಿಹಾಸಕ್ಕೆ ಸಾಕ್ಷಿಯಾದ ಸ್ಥಳ, ಬೆಂಗಳೂರಿನ ಹೊರವಲಯದ ಅಮೃತನಗರದ ಕನ್ನಾಯಕನ ಅಗ್ರಹಾರ. ಇಲ್ಲಿನ ಭವಾನಿ ಮಾನೆ ಕೆರೆಯ ಆವರಣದಲ್ಲಿ ನಡೆದ ಈ ಹಸಿರು ಕ್ರಾಂತಿಯ ಉತ್ಸವಕ್ಕೆ ಸುಮಾರು 750 ಕ್ಕೂ ಹೆಚ್ಚು ಜನರು ಸಾಕ್ಷಿಯಾದರು. ಬೆಂಗಳೂರಿನ ಭವಿಷ್ಯದ ಭರವಸೆಯ ಕುಡಿಗಳಾಗಿರುವ ಕಾಲೇಜು ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಅಪಾರವಾದ ಉತ್ಸಾಹದಿಂದ ಭಾಗವಹಿಸಿದ ನೋಟ ಚೇತೋಹಾರಿಯಾಗಿತ್ತು.

ಕವಿ ಹೆಚ್.ಎಸ್ ವೆಂಕಟೇಶ ಮೂರ್ತಿಯವರ ಹಸಿರು ಹಾಡನ್ನು ಶ್ರೀ ಕುಮಾರ ಸ್ವಾಮಿಯವರು ಸುಶ್ರಾವ್ಯವಾಗಿ ಹಾಡುವುದರೊಂದಿಗೆ ವೇದಿಕೆಯ ಕಾರ್ಯಕ್ರಮವು ಬೆಳಿಗ್ಗೆ ಒಂಭತ್ತೂವರೆ ಗಂಟೆಗೆ ಪ್ರಾರಂಭವಾಯಿತು. ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ರವರು ಗಣ್ಯರ ಮತ್ತು ಆಯ್ದ ವಿದ್ಯಾರ್ಥಿಗಳ ಸಮ್ಮುಖದಲ್ಲಿ ಸಾಂಕೇತಿಕವಾಗಿ ಒಂದು ಗಿಡವನ್ನು ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, "ಒಬ್ಬರಿಗೆ ಒಂದು ಗಿಡ ಎಂಬ ಧ್ಯೇಯವಾಕ್ಯದಡಿ ಸಿಲಿಕಾನ್ ಸಿಟಿ ಬೆಂಗಳೂರನ್ನು ಹಸಿರಾಗಿಡುವುದು ಅದಮ್ಯಚೇತನ ಸಂಸ್ಥೆಯ ಹಸಿರು ಭಾನುವಾರ ಕಾರ್ಯಕ್ರಮದ ಉದ್ದೇಶವಾಗಿದೆ " ಎಂದು ತಿಳಿಸಿದರು. ಶ್ರೀಮತಿ ಅನಿತಾ ಮಾನೆಯವರು ಹಸಿರು ಪರಿಸರದ ನಿರ್ಮಾಣ ಮತ್ತು ಭವಾನಿ ಮಾನೆ ಕೆರೆಯ ನವೀಕರಣಕ್ಕೆ ತಮ್ಮ ಕುಟುಂಬದ ಕೊಡುಗೆಯನ್ನು ವಿವರಿಸಿದರು.

ಅದಮ್ಯಚೇತನ ಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಟ್ರಸ್ಟಿಗಳಾದ ಶ್ರೀ ಎಚ್ ಎನ್ ಎ ಪ್ರಸಾದ್, ಮಾನೆ ಕುಟುಂಬದ ಹಿರಿಯರಾದ ಶ್ರೀ ಶಿವಾಜಿರಾವ್ ಮಾನೆ, ಶ್ರೀ ಹರೀಶ್ ಮಾನೆ ಮತ್ತು ಶ್ರೀಮತಿ ಅನಿತಾ ಮಾನೆ ದಂಪತಿಗಳು, ಕನ್ನಾಯಕನ ಅಗ್ರಹಾರ ಗ್ರಾಮಪಂಚಾಯತಿಯ ಸದಸ್ಯರಾದ ಶ್ರೀ ರವಿ, ಇಂದಿರಾನಗರ ರೋಟರಿ ಕ್ಲಬ್ ಅಧ್ಯಕ್ಷರಾದ ಶ್ರೀ ಫಜ್ಲುರ್ ರಹಮಾನ್, ಶ್ರೀ ಆನಂದ ಮಲ್ಲಿಗೆವಾಡ ಮತ್ತಿತರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಬೆಂಗಳೂರಿನಿಂದ ಬಿಸಿಲು ನಾಡು ಬಳ್ಳಾರಿಗೆ ಸಸ್ಯಾಗ್ರಹವನ್ನು ಕೊಂಡೊಯ್ದು ಈಗಾಗಲೇ 102 ಹಸಿರು ಭಾನುವಾರಗಳನ್ನು ನಡೆಸಿದ ಬಳ್ಳಾರಿಯ ಸಮೃದ್ಧಿ ಫೌಂಡೇಷನ್ ಮುಖ್ಯಸ್ಥೆ, ಶ್ರೀಮತಿ ಹರಿಣಿ ರಾಯಸಂ ಮತ್ತು ರಾಯಚೂರಿನಲ್ಲಿ 265 ರ ಮೈಲಿಗಲ್ಲನ್ನು ದಾಟಿರುವ ಗ್ರೀನ್ ರಾಯಚೂರಿನ ಮುಖ್ಯಸ್ಥರಾದ ಶ್ರೀ ರಾಜೇಂದ್ರ ಕುಮಾರ್, ದಾನಿಗಳಾದ ಸ್ವಾಂ ಇಂಜಿನಿಯರಿಂಗ್ ಮತ್ತು ಲೋಕೋಮೋಟೀವ್ಸ್ ಸಂಸ್ಥೆಯ ಮುಖ್ಯಸ್ಥರಾದ ಶ್ರೀ ಕಿಶೋರ್ ಗೋವಿಂದೆ ಅವರನ್ನು ಅದಮ್ಯಚೇತನ ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು.

ಶ್ರೀ ಪೂರ್ಣಪ್ರಜ್ಞರವರು ವಂದನಾರ್ಪಣೆ ಮಾಡಿದರು. ಇಡೀ ಕಾರ್ಯಕ್ರಮವನ್ನು ಡಾ. ರಾಜೇಂದ್ರ ಹೆಗ್ಡೆಯವರು ನಿರೂಪಿಸಿದರು.

ನಂತರ 1300 ಗಿಡಗಳನ್ನು ನೆಡುವ ಕಾರ್ಯಕ್ರಮ ಪ್ರಾರಂಭವಾಯಿತು. ಶ್ರೀಮತಿ ಛಾಯಾ ಬಾಪಟ್ ರವರು ವಿವರಗಳೊಂದಿಗೆ ತಯಾರಿಸಿದ್ದ 15 ಸಾಮ್ರಾಜ್ಯಗಳ ಹೆಸರಿನ ಫಲಕಗಳನ್ನು ಹಿಡಿದ ವಿದ್ಯಾರ್ಥಿಗಳು, ಅದಮ್ಯಚೇತನ ಕಾರ್ಯಕರ್ತರು ಮತ್ತು ಸಾರ್ವಜನಿಕರು ಉತ್ಸಾಹದಿಂದ ತಂಡಗಳಲ್ಲಿ ಗಿಡಗಳನ್ನು ನೆಡಲು ತಯಾರಿ ನಡೆಸಿದರು. ಶ್ರೀಮತಿ ಶ್ರೀಲಕ್ಷ್ಮಿಯವರು ಸಂಪೂರ್ಣ ವ್ಯವಸ್ಥೆಯ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದರು. ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ತಮ್ಮ ಪುತ್ರಿ ಶ್ರೀಮತಿ ಐಶ್ವರ್ಯಾ ಮತ್ತು ಇನ್ನಿತರರೊಡನೆ ಎಲ್ಲ ಕಡೆ ಸಂಚರಿಸಿ ಪ್ರತಿಯೊಬ್ಬರನ್ನೂ ಹುರಿದುಂಬಿಸುತ್ತಿದ್ದರು.

ಸುಮಾರು ಮೂರು ತಾಸಿನೊಳಗೆ ನಿಗದಿ ಮಾಡಿಕೊಂಡಿದ್ದ ಎಲ್ಲಾ ಗಿಡಗಳನ್ನು ನೆಡಲಾಯಿತು. ಅವಶ್ಯವಿದ್ದ ಕಡೆ ಪ್ರತ್ಯೇಕ ಗುಂಡಿಗಳನ್ನು ಕಾರ್ಯಕರ್ತರೇ ತೋಡಿ ಗಿಡಗಳನ್ನು ನೆಡುತ್ತಿದ್ದ ದೃಶ್ಯವೂ ಕಂಡು ಬಂದಿತು.

ಈ ಕಾರ್ಯಕ್ರಮದಲ್ಲಿ ೬೦೦ ಹೆಚ್ಚು ಯುವಜನರು, ಸಾರ್ವಜನಿಕರು ನೋಂದಾಯಿಸಿಕೊಂಡು ಭಾಗವಹಿಸಿದ್ದರು. ಭಾಗವಹಿಸಿದ್ದ ಎಲ್ಲರಿಗೂ ಪ್ರಮಾಣ ಪತ್ರದ ಜೊತೆಗೆ ಒಂದೊಂದು ಸಸಿಯನ್ನೂ ವಿತರಿಸಲಾಯಿತು. ಕಾರ್ಯಕ್ರಮದ ಕೊನೆಯಲ್ಲಿ ಭಾಗವಹಿಸಿದ ಎಲ್ಲರಿಗೂ ಅದಮ್ಯಚೇತನ ಸಂಸ್ಥೆಯ ವತಿಯಿಂದ ಊಟ ಮತ್ತು ಉಪಾಹಾರದ ವ್ಯವಸ್ಥೆ ಮಾಡಲಾಗಿತ್ತು.

**ವರದಿ: ಶ್ರೀ ಕುಮಾರಸ್ವಾಮಿ ಎಸ್**

## ಅದಮ್ಯ ಸೇವಾ

( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )




ಅದಮ್ಯ ಚೇತನದಲ್ಲಿ ದೀನ ದಯಾಳ್ ಉಪಾಧ್ಯಾಯ
ಅವರ ಜಯಂತಿಯನ್ನು ಆಚರಿಸಲಾಯಿತು.



೩೦೧ನೇ ಹಸಿರು ಭಾನುವಾರ ಕಾರ್ಯಕ್ರಮವನ್ನು ಭವಾನಿ ಮಾನೆ
ಕೆರೆ ಅಂಗಳದಲ್ಲಿ ನಡೆಸಲಾಯಿತು.



ನವರಾತ್ರಿಯ ಶುಭಸಂದರ್ಭದಲ್ಲಿ ಅದಮ್ಯಚೇತನ ಸಂಸ್ಥೆಯಲ್ಲಿ ಪೂಜಾ ಹವನಾದಿಗಳನ್ನು
ಭಕ್ತಿಶ್ರದ್ಧೆಗಳಿಂದ ಆಚರಿಸಲಾಯಿತು.



ಅದಮ್ಯಚೇತನದಲ್ಲಿ ಇಂಟರ್ನ್ ಶಿಪ್ ತರಬೇತಿ ಪಡೆಯುತ್ತಿರುವ ಕಾಲೇಜು
ವಿದ್ಯಾರ್ಥಿನಿಯರು ಸಂಸ್ಥೆಯ ವಿವಿಧ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.




ಸಸ್ಯಾಗ್ರಹದ 301ನೇ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕಾರ್ಯಕರ್ತರನ್ನು ಉದ್ದೇಶಿಸಿ
ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮಾತನಾಡುತ್ತಿರುವುದು.



ಅದಮ್ಯಚೇತನದ ವತಿಯಿಂದ ನಿರಂತರವಾಗಿ ನಡೆಯುತ್ತಿರುವ ನಿತ್ಯ ಅನ್ನದಾನ ಕಾರ್ಯಕ್ರಮವೊಂದರಲ್ಲಿ
ನಿರ್ದೇಶಕ ಶ್ರೀ ಡಿ.ಆರ್. ಸುಬ್ರಹ್ಮಣ್ಯ ಅವರಿಂದ ಸ್ವಯಂಸೇವೆ.

ಅನಂತಪಥ

ಅನಂತಪಥ ಮಾಸಪತ್ರಿಕೆಯು ಪ್ರತಿ ತಿಂಗಳ 22ನೆಯ ತಾರೀಕು ತಪ್ಪದೆ ಪ್ರಕಟವಾಗುತ್ತಿದೆ. ಈ ಪತ್ರಿಕೆಯ ಚಂದಾದಾರರಾಗಿ ಅನಂತಕುಮಾರ್ ಪ್ರತಿಷ್ಠಾನದ ಸೇವಾಚಟುವಟಿಕೆಗಳನ್ನು ಪ್ರೋತ್ಸಾಹಿಸಿ.

ರೂ. 1000 ನೀಡಿ ಚಂದಾದಾರರಾಗಲು ಮತ್ತು ಇತರ ವಿವರಗಳಿಗೆ ಈ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಿ: **8884182415**

**ಅನಂತ ಚಿತ್ರಸಂಪುಟ**

## ಹಲವರು ಮಠಾಧೀಶರು ಮತ್ತು ಧಾರ್ಮಿಕ ಮುಖಂಡರೊಡನೆ ಶ್ರೀ ಅನಂತಕುಮಾರ್







